# ಕರ್ನಾಟಕ ಸ್ಕೌಟ್ ಮತ್ತು ಗೈಡ್

ತಿಂಗಳ ವಾರ್ತಾಪತ್ರಿಕೆ

# Karnataka Scout & Guide

Monthly News Magazine

Vol -20 Issue-02 February 2023 ₹ 10/-





ಫೆಬ್ರವರಿ 09ರಂದು ಬೆಂಗಳೂರು ರಾಜಭವನದಲ್ಲಿ ರಾಜ್ಯ ಸಂಸ್ಥೆ ಏರ್ಪಡಿಸಿದ್ದ ರಾಜ್ಯಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರೂ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆ ಪೋಷಕರೂ ಆದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಕಬ್ಸ್-ಬುಲ್ ಬುಲ್ಸ್, ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳಿಗೆ ಚತುರ್ಥ ಚರಣ್, ಹೀರಕ್ ಪಂಖ್, ರಾಜ್ಯಪುರಸ್ಕಾರ್ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಿದರು.
ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಆಯುಕ್ತರುಗಳಾದ ಶ್ರೀ ಎಂ.ಎ. ಖಾಲಿದ್, ಶ್ರೀಮತಿ ಗೀತಾನಟರಾಜ್ ಚಿತ್ರದಲ್ಲಿದ್ದಾರೆ.



ಫೆಬ್ರವರಿ 08 ರಂದು ಬೆಂಗಳೂರಿನ ಶಾಂತಿಗೃಹದಲ್ಲಿ ನಡೆದ “ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆಯ” ಸಮಾರೋಪ ಸಮಾರಂಭದಲ್ಲಿ ಹಿರಿಯ ಸಾಹಿತಿಗಳು ನಾಡೋಜ ಪ್ರಶಸ್ತಿ ಪುರಸ್ಕೃತರು ಹಾಗೂ ರಾಜ್ಯ ಪ್ರಕಟಣಾ ಸಮಿತಿಯ ಅಧ್ಯಕ್ಷರಾದ ಡಾ॥ ಗೊ.ರು. ಚನ್ನಬಸಪ್ಪರವರು ಹಿತವಚನಗಳನ್ನು ಹೇಳಿದರು. ಬೆಂಗಳೂರು ದೂರದರ್ಶನ ಕೇಂದ್ರದ ನಿರ್ದೇಶಕರಾದ ಶ್ರೀಮತಿ ನಿರ್ಮಲಾ ಎಲಿಗಾರ್ ಹಾಗೂ ರಾಜ್ಯ ಸಂಸ್ಥೆ ಪದಾಧಿಕಾರಿಗಳು ಚಿತ್ರದಲ್ಲಿದ್ದಾರೆ.




ಫೆಬ್ರವರಿ 09 ಮತ್ತು 10 ರಂದು ಡಾ. ಆನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರದಲ್ಲಿ ರಾಜ್ಯಸಂಸ್ಥೆ ಹಾಗೂ ಪರಿಸರ ಶಿಕ್ಷಣ ಕೇಂದ್ರ ಮತ್ತು ಯುನಿಸೆಫ್ ಸಂಸ್ಥೆ ಸಹಯೋಗದಲ್ಲಿ ಹವಾಮಾನ ಮತ್ತು ಪರಿಸರ ಶಿಕ್ಷಣ ತರಬೇತಿ ಕುರಿತು ಕಲ್ಯಾಣ ಕರ್ನಾಟಕ ವಿಭಾಗದ ಉಪನ್ಯಾಸಕರುಗಳು/ ಉಪನ್ಯಾಸಕಿಯರುಗಳಿಗೆ ಏರ್ಪಡಿಸಿದ ಉದ್ಘಾಟನಾ ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಯೂನಿಸೆಫ್ ಸಂಸ್ಥೆಯ ಅಧಿಕಾರಿಗಳಾದ ಶ್ರೀ ವೆಂಕಟೇಶ್, ಶ್ರೀ ಹರಳಿಕಟ್ಟಿ, ಶ್ರೀ ಪ್ರಭಾತ್ ಕಲ್ಕೂರ್, ಶ್ರೀಮತಿ ರೇಜಿನಿ ಸಿಂಪ್ಸನ್, ಶ್ರೀ ಸುಜಯ್ ಮಜೂಂಧಾರ್, ಶ್ರೀ ದಿಲೀಪ್ ಶರ್ಮಾ ಅವರುಗಳು ಉಪಸ್ಥಿತರಿದ್ದರು.

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 20 Issue : 02 February 2023

**ಒಳಪುಟಗಳಲ್ಲಿ...**

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ವಿಶ್ವ ಪ್ರವಾಸ ...05
ರಾಜ್ಯಪುರಸ್ಕಾರ್ ರ‍್ಯಾಲಿ ...06
ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ ...08
ಹವಾಮಾನ ಮತ್ತು ಪರಿಸರ ಶಿಕ್ಷಣ ತರಬೇತಿ ...10
ಜಿಲ್ಲಾ ವಾರ್ತೆಗಳು ...11
ವಾತ್ಸಲ್ಯ ಯೋಜನೆ ...28
ಶ್ರದ್ಧಾಂಜಲಿ ...29



080-2226 0017, 2226 7470 www.bsgkarnataka.org The Bharat Scouts & Guides-Karnataka



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,**

ಫೆಬ್ರವರಿ 8 ರಂದು ರಾಜ್ಯ ಕೇಂದ್ರ ಕಚೇರಿಯಲ್ಲಿ ನಡೆದ 'ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ' ಹಾಗೂ ಫೆಬ್ರವರಿ 9 ರಂದು ಬೆಂಗಳೂರು ರಾಜಭವನದ 'ಗಾಜಿನ ಮನೆ'ಯಲ್ಲಿ ನಡೆದ 'ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭ'ಗಳು ಯಶಸ್ವಿಯಾಗಿ ಜರುಗಿದವು. ಎರಡೂ ಸಮಾರಂಭಗಳಲ್ಲಿ ಭಾಗವಹಿಸಿದ್ದ ಸ್ಕೌಟ್ಸ್-ಗೈಡ್ಸ್ ಮಕ್ಕಳೆಲ್ಲರೂ ಸಡಗರದಿಂದ ಭಾಗವಹಿಸಿ ಸಂಭ್ರಮಿಸಿದ್ದಾರೆ. ನೆನಪಿನ ಬುತ್ತಿಯನ್ನು ತಮ್ಮೊಂದಿಗೆ ಕೊಂಡೊಯ್ದಿದ್ದಾರೆ. 12 ಜಿಲ್ಲೆಗಳಿಂದ ಸ್ಥಳೀಯ ಮತ್ತು ಜಿಲ್ಲಾ ಮಟ್ಟಗಳ ಸ್ಪರ್ಧೆಗಳಲ್ಲಿ ಆಯ್ಕೆಯಾಗಿ ಬಂದಿದ್ದ ಸುಮಾರು 350 ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು, ಗೀತಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿದರು.

2022-23ನೇ ಸಾಲಿಗೆ 684 ಕಬ್ಸ್‌ಗಳು, 756 ಬುಲ್ ಬುಲ್ಸ್‌ಗಳು, 1688 ಸ್ಕೌಟ್ಸ್‌ಗಳು, 1910 ಗೈಡ್ಸ್‌ಗಳು, 166 ರೋವರ್ಸ್ ಮತ್ತು 262 ರೇಂಜರ್ಸ್‌ಗಳನ್ನು ಒಳಗೊಂಡಂತೆ ಒಟ್ಟು 5466 ವಿದ್ಯಾರ್ಥಿಗಳು ರಾಜ್ಯ ಪುರಸ್ಕಾರ ಪ್ರಶಸ್ತಿಗಳನ್ನು ಪಡೆದಿರುವುದು ಹೆಮ್ಮೆಯ ವಿಚಾರ. ಈ ಎರಡು ಮಹತ್ವ ಪೂರ್ಣ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಎಲ್ಲ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಮತ್ತು ಅವರ ಯಶಸ್ಸಿಗೆ ಮಾರ್ಗದರ್ಶನ ನೀಡಿದ ದಳನಾಯಕರು ಹಾಗೂ ನಾಯಕಿಯರುಗಳಿಗೆ ಮತ್ತು ಪೋಷಕರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು. ವಿದ್ಯಾರ್ಥಿಗಳ ಆಯ್ಕೆ ಮತ್ತು ನಿಯೋಜನೆಯಲ್ಲಿ ಮುತುವರ್ಜಿ ವಹಿಸಿದ ಎಲ್ಲಾ ಸ್ಥಳೀಯ ಹಾಗೂ ಜಿಲ್ಲಾ ಸಂಸ್ಥೆಗಳ ಸಹಕಾರವನ್ನು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಎರಡು ತಿಂಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯಲ್ಲಿ ನಡೆದ ಅಂತರರಾಷ್ಟ್ರೀಯ ಸ್ಕೌಟ್ಸ್-ಗೈಡ್ಸ್ ವಿಶ್ವ ಸಾಂಸ್ಕೃತಿಕ ಜಾಂಬೋರಿಯ ಯಶಸ್ಸಿನ ಅಲೆಯಲ್ಲಿ ನಾವಿನ್ನೂ ಇದ್ದೇವೆ. ಈ ಜಾಂಬೋರಿಯ ಯಶಸ್ಸು ಕರ್ನಾಟಕದಲ್ಲಿ ಸ್ಕೌಟ್ಸ್-ಗೈಡ್ ಚಳುವಳಿಗೆ ಹೊಸ ಚೈತನ್ಯ ಮೂಡಿಸಿದೆ. ಮಕ್ಕಳನ್ನು ಮತ್ತು ಪೋಷಕರನ್ನು ಸ್ಕೌಟ್ಸ್-ಗೈಡ್ಸ್ ಚಳುವಳಿ ಮತ್ತಷ್ಟು ಆಕರ್ಷಿಸುವಂತಾಗಿದೆ. ಶಿಕ್ಷಣ ಇಲಾಖೆ ಮತ್ತು ಸರ್ಕಾರಕ್ಕೆ ನಮ್ಮ ಮೇಲೆ ಭರವಸೆ ಹೆಚ್ಚಿಸಿದೆ. ಈ ಜಾಂಬೋರಿಯ ಯಶಸ್ಸಿನಲ್ಲಿ ಎಲ್ಲಾ ಜಿಲ್ಲೆಗಳ ಮತ್ತು ಸ್ಥಳೀಯ ಸಂಸ್ಥೆಗಳ ಸಹಕಾರದೊಡ್ಡದು. ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿ ವಿಶ್ವ ಸಾಂಸ್ಕೃತಿಕ ಜಾಂಬೋರಿಯ ಯಶಸ್ಸಿಗೆ ವಿವಿಧ ರೀತಿಯಲ್ಲಿ ಸಹಕರಿಸಿದವರೆಲ್ಲರಿಗೂ ಖುದ್ದು ಭೇಟಿ ಮಾಡುವ ಮೂಲಕ ಕೃತಜ್ಞತೆಯನ್ನು ಸಲ್ಲಿಸುವ ಪ್ರಯತ್ನದಲ್ಲಿದ್ದೇನೆ. ಅದರಂತೆ, ಇತ್ತೀಚೆಗೆ ಕಲ್ಯಾಣ ಕರ್ನಾಟಕದ ಜಿಲ್ಲೆಗಳಾದ ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ, ಕಲಬುರಗಿ ಜಿಲ್ಲೆಗಳಿಗೆ ಭೇಟಿ ನೀಡಿ ಜಾಂಬೋರಿಯ ಯಶಸ್ಸಿಗೆ ಸಹಕರಿಸಿದ ಜಿಲ್ಲೆಗಳ ದಾನಿಗಳಿಗೆ ಧನ್ಯವಾದಗಳನ್ನು ತಿಳಿಸಿದ್ದೇನೆ. ಆ ಮೂಲಕ ಸುಮಾರು ಐದು ಸಾವಿರಕ್ಕೂ ಹೆಚ್ಚು ಮಹನೀಯರನ್ನು ತಲುಪಿದ್ದೇನೆ. ಕೆಲವು ಶಾಲೆಗಳಿಗೆ ಭೇಟಿ ನೀಡಿ, ನೂರಾರು ಶಿಕ್ಷಕರೊಂದಿಗೆ, ಸಾವಿರಾರು ಮಕ್ಕಳೊಂದಿಗೆ ಸಂವಾದ ನಡೆಸಿದ್ದೇನೆ. ಇದು ನನಗೆ ಅಗಾಧವಾದ ಅನುಭವ ಹಾಗೂ ಸಂತೋಷವನ್ನುಂಟುಮಾಡಿದೆ.

ಈ ಒಂದು ದಶಕದಲ್ಲಿ ನಮ್ಮ ರಾಜ್ಯ ಸಂಸ್ಥೆಯಿಂದ ರಾಜ್ಯ ಮಟ್ಟದ ಎರಡು ಮತ್ತು ರಾಷ್ಟ್ರ ಮಟ್ಟದ ಒಂದು ಜಾಂಬೋರಿಯನ್ನು ನಡೆಸಿದ್ದೇವೆ. ಇತ್ತೀಚೆಗೆ ಯಶಸ್ವಿಯಾಗಿ ನಡೆದ ಅಂತರರಾಷ್ಟ್ರೀಯ ವಿಶ್ವ ಸ್ಕೌಟ್ಸ್-ಗೈಡ್ಸ್ ಸಾಂಸ್ಕೃತಿಕ ಜಾಂಬೋರಿಯ ಅಭೂತಪೂರ್ವ ಯಶಸ್ಸು ನಮ್ಮ ರಾಜ್ಯ ಸಂಸ್ಥೆಗೆ ಕಳಸಪ್ರಾಯವಾಗಿ ಪರಿಣಮಿಸಿದೆ. ಇದರ ನಡುವೆ ಎರಡು ವರ್ಷಗಳ ಕಾಲ ಕರೋನಾದ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಾಗಲೂ ಸಾಮಾಜಿಕ ಜಾಲತಾಣಗಳ ಮೂಲಕ ವಿನೂತನ ಕಾರ್ಯಕ್ರಮಗಳನ್ನು ನಡೆಸಿ ಚಳವಳಿಯನ್ನು ಜೀವಂತವಾಗಿರಿಸಿದ್ದೇವೆ. ಹಲವಾರು ಸರ್ಕಾರಿ ಮತ್ತು ಸಾರ್ವಜನಿಕ ಸಮಾರಂಭಗಳಲ್ಲಿ, ಮತದಾನದ ಸಂದರ್ಭಗಳಲ್ಲಿ ನಮ್ಮ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಸ್ಕೌಟ್-ಗೈಡ್ ಚಳವಳಿಯನ್ನು ರಾಜ್ಯದೆಲ್ಲೆಡೆ ಸದೃಢಗೊಳಿಸಲು ತಜ್ಞರು ಮತ್ತು ಅನುಭವಿಗಳಿಂದ ಪಡೆದ ಸಲಹೆಗಳನ್ನು ಅನುಷ್ಠಾನಗೊಳಿಸಲು ಎಲ್ಲ ಸ್ಥಳೀಯ ಸಂಸ್ಥೆಗಳೂ ಸಕಾರಾತ್ಮಕವಾಗಿ ಸ್ಪಂದಿಸಿವೆ. ರಾಜ್ಯದ ವಿವಿಧ ಭಾಗಗಳಲ್ಲಿ ಸಂಸ್ಥೆಗೆ ಮೂಲಭೂತ ಸೌಕರ್ಯಗಳು ಮತ್ತು ಗುಣಾತ್ಮಕವಾದ ಸ್ಕೌಟಿಂಗ್ ಗೈಡಿಂಗ್‌ನಲ್ಲಿ ಸರ್ವಾಂಗೀಣ ಅಭಿವೃದ್ಧಿ ಸಾಧಿಸಲು ಪ್ರಯತ್ನಿಸಲಾಗಿದೆ. ಒಟ್ಟಿನಲ್ಲಿ ಈ ಹತ್ತು ವರ್ಷಗಳ ಅವಧಿಯಲ್ಲಿ ಹಲವು ಪ್ರಥಮಗಳಿಗೆ ನಮ್ಮ ಸಂಸ್ಥೆ ಸಾಕ್ಷಿಯಾಗಿದೆ. ನನ್ನೊಬ್ಬನಿಂದ ಅಥವಾ ರಾಜ್ಯ ಸಂಸ್ಥೆಯ ಪದಾಧಿಕಾರಿಗಳಿಂದ ಮಾತ್ರ ಇದು ಸಾಧ್ಯವಾಗಿಲ್ಲ. ಇದಕ್ಕೆ ಕಾರಣರಾಗಿರುವ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಎಲ್ಲ ಪದಾಧಿಕಾರಿಗಳಿಗೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ, ಸರ್ಕಾರಿ ಶಾಲಾ ಕಾಲೇಜುಗಳ ಶಿಕ್ಷಕ ಹಾಗೂ ಉಪನ್ಯಾಸಕ ವೃಂದದವರಿಗೆ, ಸರ್ಕಾರದ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ, ಪೋಷಕರಿಗೆ ನನ್ನ ಹೃದಯ ಪೂರ್ವಕ ಅಭಿನಂದನೆಗಳು. ಸ್ಕೌಟ್-ಗೈಡ್ ಚಳವಳಿಯ ಬೆಳವಣಿಗೆಗೆ, ದಾನಿಗಳ ಹಾಗೂ ಸಹೃದಯಿಗಳ ಬೆಂಬಲ, ಸಹಕಾರ ಅತ್ಯಗತ್ಯವಾಗಿದೆ.

ಹಿಂದಿನ ವರ್ಷಗಳ ಸಾಧನೆಗಳು ನಮಗೆ ಸದಾ ಸ್ಫೂರ್ತಿದಾಯಕವಾಗಿರಲಿ ಮತ್ತು ಧನಾತ್ಮಕ ಬದಲಾವಣೆಗಳಿಗೆ ದಾರಿ ದೀಪವಾಗಿರಲಿ. ಮುಂದಿನ ದಿನಗಳಲ್ಲಿ ನಾವು ಸಾಧಿಸಬೇಕಾದದ್ದು ಬಹಳಷ್ಟಿದೆ. ನಮ್ಮ ತರಬೇತಿಗಳಲ್ಲಿ ಗುಣಮಟ್ಟ ಮತ್ತು ಗುಣಾತ್ಮಕತೆ ಬರಬೇಕಾಗಿದೆ. ಸೃಜನಶೀಲವಾದ ಕಾರ್ಯಕ್ರಮಗಳು ಆಗಬೇಕಾಗಿವೆ. ನಾವೆಲ್ಲರೂ ಪರಿಣಾಮಕಾರಿಯಾಗಿ ತೊಡಗಿಸಿಕೊಂಡಾಗ ರಾಜ್ಯದಲ್ಲಿ ಈ ಚಳವಳಿಯ ಬಲವರ್ಧನೆ ಸಾಧ್ಯವಾಗುತ್ತದೆ.

ನಮ್ಮ ಚಳುವಳಿಯ ಸ್ಥಾಪಕರಾದ ಬೇಡನ್ ಪೊವೆಲ್ ರವರ ಜನ್ಮದಿನವಾದ ಫೆಬ್ರವರಿ 22 ಅನ್ನು ಸ್ಕೌಟ್ಸ್ ಮತ್ತು ಗೈಡ್ಸ್‌ನ 'ಸಂಸ್ಥಾಪಕರ ದಿನಾಚರಣೆ ಹಾಗೂ ಚಿಂತನಾ ದಿನಾಚರಣೆ'ಯನ್ನಾಗಿ ಆಚರಿಸಲಾದ ಈ ಸಂದರ್ಭದಲ್ಲಿ ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧುಗಳಿಗೆ ಶುಭಾಶಯಗಳನ್ನು ತಿಳಿಸುತ್ತೇನೆ. ಅಂದು ರಾಜ್ಯಾದ್ಯಂತ ನಮ್ಮ ದಳ ನಾಯಕರು, ರೋವರ್ಸ್-ರೇಂಜರ್ಸ್, ಸ್ಕೌಟ್ಸ್-ಗೈಡ್ಸ್‌ಗಳು ವಿಭಿನ್ನ ರೀತಿಯಲ್ಲಿ ಆಚರಿಸಿದ್ದಾರೆ. ಬೆಂಗಳೂರಿನಲ್ಲಿಯೂ ಸಹ ಎರಡು – ಮೂರು ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿದ್ದು ಸಂತೋಷವಾಗಿದೆ.

ಭಾರತದೇಶ ಕಂಡ ಅಪ್ರತಿಮ ಮೇಧಾವಿ ವಿಜ್ಞಾನಿ ಭಾರತರತ್ನ ಸರ್. ಸಿ.ವಿ. ರಾಮನ್ ಅವರು ತಮ್ಮ ಬೆಳಕಿನ ಚದುರುವಿಕೆ ಬಗೆಗಿನ ಸಂಶೋಧನೆಯ ಫಲಿತಾಂಶವನ್ನು ಜಗತ್ತಿಗೆ ಪ್ರಚುರಪಡಿಸಿದ ದಿನ ಫೆಬ್ರವರಿ 28. ಇದರ ಸವಿನೆನಪಿನಲ್ಲಿ ಆ ದಿನವನ್ನು "ವಿಜ್ಞಾನ ದಿನ"ವನ್ನಾಗಿ ಆಚರಿಸುತ್ತಿರುವ ಈ ಸಂದರ್ಭದಲ್ಲಿ "ವಿಜ್ಞಾನದ ಎಲ್ಲ ಶಿಕ್ಷಕರುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಶುಭಾಶಯಗಳು.

ಮಾರ್ಚ್ 8 ರಂದು"ವಿಶ್ವ ಮಹಿಳಾ ದಿನಚರಣೆ"ಯನ್ನು ಆಚರಿಸುತ್ತಿದ್ದು, ಎಲ್ಲಾ ಮಹಿಳೆಯರಿಗೆ ದಿನಾಚರಣೆಯ ಹಾರ್ದಿಕ ಶುಭಾಶಯಗಳು. ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

" ನೀವು ತೆಗೆದು ಕೊಂಡದ್ದನ್ನು ತಿನ್ನಿರಿ – ತಿನ್ನುವುದನ್ನು ಮಾತ್ರ ತೆಗೆದುಕೊಳ್ಳಿ"
ಆಹಾರವನ್ನು ವ್ಯರ್ಥಗೊಳಿಸದಿರಿ

# ವಿಶ್ವ ಪ್ರವಾಸ

ನಾಡೋಜ ಡಾ. ಗೊ.ರು. ಚನ್ನಬಸಪ್ಪ
ಗೌರವಾಧ್ಯಕ್ಷರು, ಪ್ರಕಟಣೆಗಳ ಸಮಿತಿ
ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ

ಮನುಷ್ಯ ಸೃಷ್ಟಿಯ ಒಂದು ಅಂಗವಾದರೂ, ಇತರ ಸೃಷ್ಟಿಗಳನ್ನು ಕಾಣುವ ಮತ್ತು ಕಂಡ ದೃಶ್ಯಗಳನ್ನು ಅನುಭವಿಸುವ, ಅನುಕರಿಸುವ, ಅನುಸರಿಸುವ ಒಂದು ವಿಶಿಷ್ಟ ಶಕ್ತಿಯನ್ನು ಅವನಿಗೆ ಸೃಷ್ಟಿ ಕರುಣಿಸಿದೆ. ತನ್ನ ಬದುಕಿಗೆ ದುಡಿಯತೊಡಗಿದಂದಿನಿಂದಲೂ, ಬದುಕಿನ ಬೇಸರ ಕಳೆದುಕೊಳ್ಳಲಿಕ್ಕೆ ಯಾವುದಾದರೂ ಒಂದು ಹವ್ಯಾಸವನ್ನು ಹಚ್ಚಿಕೊಂಡೇ ಬಂದಿದ್ದಾನೆ. ಅಂತಹ ಹವ್ಯಾಸಗಳಲ್ಲಿ ಪ್ರವಾಸವೂ ಒಂದು.

ನಮಗೆ ಲೋಕದರ್ಶನವಾಗುವುದು ಕಣ್ಣುಗಳಿಂದ. ಆದರೆ ಆ ಕಣ್ಣುಗಳ ದೃಷ್ಟಿಗೂ ದೂರದ ಮಿತಿ ಇದೆ. ಎಂತಲೇ ದೂರದ ದೃಶ್ಯಗಳನ್ನು ಹತ್ತಿರದಿಂದ ನೋಡಲು ಮನುಷ್ಯನ ಮನಸ್ಸು ಇಚ್ಛಿಸುತ್ತದೆ. ಹಾಗಾಗಿ ಅವನ ಓಡಾಟ ಆರಂಭವಾಗುತ್ತದೆ. ನೋಡಬೇಕಾದುದನ್ನು ಕಣ್ಣಾರೆ ಹತ್ತಿರದಿಂದ ನೋಡಲು ಹೋಗಿಬರುವುದೇ ಪ್ರವಾಸ.

ನಾವು ಹೆಚ್ಚು ಪ್ರವಾಸ ಮಾಡಿದಂತೆಲ್ಲಾ ಹೆಚ್ಚು ನೋಡುತ್ತೇವೆ, ಹೆಚ್ಚು ನೋಡಿದಂತೆಲ್ಲ ಹೆಚ್ಚು ಕಲಿಯುತ್ತೇವೆ. 'ದೇಶ ತಿರುಗಿ ನೋಡು, ಕೋಶ ಓದಿ ನೋಡು' ಎಂಬ ಗಾದೆ ಮಾತೊಂದಿದೆ, ಆದರೆ ವಾಸ್ತವವಾಗಿ ಕೋಶ ಎಂದರೆ ಗ್ರಂಥದ ಓದಿನಿಂದ ಗಳಿಸುವ ಜ್ಞಾನಕ್ಕಿಂತ ಪ್ರವಾಸದಿಂದ ನಾವು ಹೆಚ್ಚು ಜ್ಞಾನ ಪಡೆಯುತ್ತೇವೆ. ಪುಸ್ತಕದ ಓದಿನಿಂದ ಲೋಕಾನುಭವ ಸಾಧ್ಯವಾಗದು. ಆದ್ದರಿಂದ ಪ್ರವಾಸ ಒಂದು ರೀತಿಯಲ್ಲಿ ಲೋಕಾನುಭವ ಗಳಿಸಿಕೊಡುವ ಒಂದು ಅದ್ಭುತ ಗ್ರಂಥ,

ಪ್ರವಾಸ ನಮಗೆ ನಿಜವಾದ ಜೀವನ ಶಿಕ್ಷಣ ನೀಡುತ್ತದೆ, ಪರಿಸ್ಥಿತಿಗೆ ಹೊಂದಿ ಕೊಳ್ಳುವ, ಸ್ವಾವಲಂಬಿಯಾಗುವ, ಇನ್ನೊಂದನ್ನು ಅರ್ಥಮಾಡಿಕೊಳ್ಳುವ, ನಿರ್ಭಯದಿಂದ ಓಡಾಡುವ, ಸರಳವಾಗಿ ಸರಸವಾಗಿ ಬದುಕುವ, ಪರಿಸರದೊಂದಿಗೆ ಕೂಡಿದ, ತಪ್ಪುಗಳನ್ನು ಕ್ಷಮಿಸಿ ಉದಾರವಾಗುವ, ಚಿಕಿತ್ಸಕ ದೃಷ್ಟಿಯಿಂದ ನೋಡುವ ಕುತೂಹಲವನ್ನು ಬೆಳೆಸಿಕೊಳ್ಳುವ, ಸುಖ ದುಃಖಗಳನ್ನು ಸಂಯಮದಿಂದ ಅನುಭವಿಸುವ, ಲೋಕ ವ್ಯವಹಾರ ಜ್ಞಾನವನ್ನು ಸಂಗ್ರಹಿಸುವ, ಶ್ರದ್ಧೆ – ಸಾಹಸಗಳನ್ನು ಮೈಗೂಡಿಸಿಕೊಳ್ಳುವ ಅವಕಾಶವಿರುವ ಒಂದು ದೊಡ್ಡ ಮಾಧ್ಯಮವೆಂದರೆ ಪ್ರವಾಸ.

ಪ್ರವಾಸದಿಂದ ನಮ್ಮ ದೃಷ್ಟಿ ವಿಶಾಲಗೊಳ್ಳುತ್ತದೆ; ನಮ್ಮ ಜ್ಞಾನ ವಿಸ್ತಾರಗೊಳ್ಳುತ್ತದೆ. ಅತ್ತಿತ್ತ ಸಂಚಾರ ಮಾಡದೆ, ಕತ್ತಲೆಯ ಕೋಣೆಯಲ್ಲೇ ಕುಳಿತ ವ್ಯಕ್ತಿಗೆ ಇದು ಸಾಧ್ಯವಾಗುವುದಿಲ್ಲ. ಇದು ಅನುಭವಕ್ಕೆ ಬಂದೇ ಮನುಷ್ಯ ಪ್ರವಾಸದ ಹವ್ಯಾಸ ಬೆಳೆಸಿಕೊಂಡಿರುವುದು.

ಸೃಷ್ಟಿಯ ವೈಭವ, ವೈವಿಧ್ಯಗಳ ದರ್ಶನವಾಗುವುದೇ ಪ್ರವಾಸದಿಂದ, ವಿಶ್ವದ ಬೇರೆ ಬೇರೆಡೆಗಳಲ್ಲಿ ಇರುವ ಮಾನವ ಜನಾಂಗಗಳ ಪದ್ಧತಿ ಪರಂಪರೆಗಳ ಅರಿವಾಗುವುದೇ ಪ್ರವಾಸದಿಂದ, ನಿಸರ್ಗದ ಪರಿಸರದಲ್ಲಿ ವರ್ಣಮಯ ಪ್ರಾಣಿ ಪಕ್ಷಿಗಳು, ನದಿ–ಸರೋವರಗಳು, ಸಾಗರ–ಪರ್ವತಗಳು, ಜಲಾಶಯ–ದೇವಾಲಯಗಳು, ಯಾತ್ರಾಸ್ಥಳಗಳು, ಪ್ರಾಚೀನ ಸ್ಮಾರಕಗಳು, ಗುಹೆ–ಗಹ್ವರಗಳು, ಐತಿಹಾಸಿಕ ಸ್ಥಳಗಳು, ಆಧುನಿಕ ನಗರಗಳು, ವಿವಿಧ ವೇಷ–ಭಾಷೆಗಳು, ಇವನ್ನೆಲ್ಲ ಅಚ್ಚುಮಾಡಿದ ಚಿತ್ರಗಳಲ್ಲಿ ನೋಡಿ ಅನುಭವಿಸಲಾಗದು. ಅವು ಇರುವಲ್ಲಿಗೇ ಹೋಗಿ ನೋಡಿ ಪಡೆಯುವ ಆನಂದವೇ ಬೇರೆ.

ಹಾಗೆಯೇ ಪ್ರವಾಸದಲ್ಲಿ ನಮಗೆ ಜನಜೀವನದ ವಿರಾಟ್ ದರ್ಶನವೇ ಆಗುತ್ತದೆ. ಕಲಾವಿದರು, ಉದ್ಯಮಿಗಳು, ಪುರೋಹಿತ–ಪಾದ್ರಿಗಳು, ರಾಜಕಾರಣಿಗಳು, ಕಾರ್ಯಭಾರಿಗಳು, ಯಾಂತ್ರಿಕರು, ತಾಂತ್ರಿಕರು, ಕೃಷಿಕರು, ಆಡಳಿತಗಾರರು, ಮದ್ದು–ಮಾಟ ಮಾಡುವವರು, ನ್ಯಾಯವಾದಿಗಳು, ನಕಲಿ ವೇಷಧಾರಿಗಳು, ಭಿಕ್ಷುಕರು, ದಾನಿಗಳು, ವಿಜ್ಞಾನಿಗಳು, ಅಜ್ಞಾನಿಗಳು, ವೈದ್ಯರು, ದಲ್ಲಾಳಿಗಳು, ಶ್ರಮಜೀವಿಗಳು, ಶ್ರೀಮಂತರು, ಅನಾಥರು, ಅಂಗಹೀನರು, ಅಧ್ಯಾಪಕರು, ಹೀಗೆ ಬದುಕಿನ ನೂರಾರು ಬಗೆಯ ವ್ಯಕ್ತಿಗಳು ನಮ್ಮ ಸಂಪರ್ಕಕ್ಕೆ ಬರುತ್ತಾರೆ. ಅವರೊಡನೆ ಮಾತನಾಡುವ ಅವಕಾಶ ಸಿಕ್ಕುತ್ತದೆ. ಒಬ್ಬೊಬ್ಬರಿಂದ ಒಂದೊಂದು ಅನುಭವ ಪಡೆಯುತ್ತೇವೆ. ಇದರಿಂದ ನಮ್ಮ ಬದುಕನ್ನು ಹದಗೊಳಿಸಿಕೊಳ್ಳಲು ಅವಕಾಶವಾಗುತ್ತದೆ.

ಪ್ರವಾಸವೆಂದರೆ, ಎಲ್ಲ ಸುಖದ ಅನುಭವವೆಂದೇನೂ ಅಲ್ಲ. ಪ್ರವಾಸ ಮಾಡುವಾಗ ಎಷ್ಟೋ ಅನಾನುಕೂಲಗಳ ಸಂದರ್ಭಗಳು ಬರಬಹುದು. ಆದರೆ ಅವೆಲ್ಲವೂ ನಮಗೆ ಶಿಕ್ಷಣವಾಗುತ್ತವೆ. ಪ್ರವಾಸದಲ್ಲಿ ಪಟ್ಟ ಅನುಭವಗಳು ನಮ್ಮ ಬದುಕಿನ ಹಾದಿಗೆ ಬುತ್ತಿಯಾಗುತ್ತವೆ.

ಪ್ರವಾಸವೆಂದರೆ ವೆಚ್ಚದ ಪ್ರಶ್ನೆ ಇದ್ದೇ ಇರುತ್ತದೆ. ಆದರೆ, ಅದು ನಮ್ಮ ಜ್ಞಾನ ಸಂಪಾದನೆಗೆ ಹೂಡಿದ ಬಂಡವಾಳವಾಗುತ್ತದೆ. ಆದರಿಂದ ಲಾಭವೇ ಹೊರತು ನಷ್ಟವಿಲ್ಲ. ಪ್ರವಾಸದಲ್ಲಿ ದೈವಸೃಷ್ಟಿಯ ಅದ್ಭುತಗಳಷ್ಟೇ ಅಲ್ಲ, ಮಾನವಸೃಷ್ಟಿಯ ಅದ್ಭುತಗಳನ್ನೂ ನಾವು ಕಾಣುತ್ತೇವೆ, ಅದರಿಂದ ನಮ್ಮ ನಿತ್ಯ ಬದುಕಿನ ಬೇಸರ ಕಳೆಯುವುದಷ್ಟೇ ಅಲ್ಲ, ನಮ್ಮ ಕುತೂಹಲ–ಕಾರ್ಯಶೀಲತೆಗಳಿಗೂ ಸ್ಫೂರ್ತಿ ದೊರಕುತ್ತದೆ. ಪ್ರವಾಸ ವೈಯಕ್ತಿಕವಾಗಿ ಹೇಗೆ ಲಾಭದಾಯಕವೋ, ರಾಜ್ಯದ ಬೊಕ್ಕಸಕ್ಕೂ ಲಾಭದಾಯಕ, ಎಂತಲೇ ವಿಶ್ವದಾದ್ಯಂತ ಪ್ರವಾಸೋದ್ಯಮಕ್ಕೆ ಹೆಚ್ಚು ಗಮನ ಕೊಡಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ನಾವು ಪ್ರವಾಸದ ಹವ್ಯಾಸ ಬೆಳೆಸಿಕೊಳ್ಳಬೇಕು. ಪ್ರವಾಸ ಒಂದು ಪ್ರಶಿಕ್ಷಣ.




# ರಾಜ್ಯಪುರಸ್ಕಾರ್ ರ್‍ಯಾಲಿ

ಫೆಬ್ರವರಿ 09 ರಂದು ರಾಜ್ಯ ಪುರಸ್ಕಾರ, ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬೆಂಗಳೂರಿನ ರಾಜಭವನದ ಗಾಜಿನ ಮನೆಯಲ್ಲಿ ಆಯೋಜಿಸಲಾಗಿತ್ತು. 35 ಜಿಲ್ಲೆಗಳಿಂದ 51 ಕಬ್ಸ್, 9 ಕಬ್ ಮಾಸ್ಟರ್ಸ್, 149, ಸ್ಕೌಟ್ಸ್‌ಗಳು, 48 ಸ್ಕೌಟ್ ಮಾಸ್ಟರ್ಸ್, 47 ರೋವರ್ಸ್, 6 ರೋವರ್ ಸ್ಕೌಟ್ ಲೀಡರ್ಸ್, 53 ಬುಲ್‌ಬುಲ್ಸ್, 8 ಫ್ಲಾಕ್ ಲೀಡರ್ಸ್, 164 ಗೈಡ್ಸ್‌ಗಳು, 40 ಗೈಡ್ ಕ್ಯಾಪ್ಟನ್ಸ್, 39 ರೇಂಜರ್ಸ್‌ಗಳು, 10 ರೇಂಜರ್ ಲೀಡರ್ಸ್, ಒಟ್ಟು 624 ಮಕ್ಕಳು ಮತ್ತು ಶಿಕ್ಷಕರು ಹಾಗೂ 80 ಪೋಷಕರು ಸೇರಿ ಒಟ್ಟು 704 ಜನ ಭಾಗವಹಿಸಿದ್ದರು.

ಶಾಂತಿಗೃಹದಲ್ಲಿ ಬೆಳಗಿನ ಉಪಹಾರದ ನಂತರ ಧ್ವಜಾರೋಹಣವನ್ನು ನೆರವೇರಿಸಿ ಮಕ್ಕಳಿಗೆ "ರಾಜಭವನ" ರ್‍ಯಾಲಿಯ ಸಂಪೂರ್ಣ ಮಾಹಿತಿ ಹಾಗೂ ದಿನದ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ನೀಡಲಾಯಿತು. ವಿಭಾಗವಾರು ಮಕ್ಕಳ ಸಮವಸ್ತ್ರ, ಪ್ರಾವಿಣ್ಯತಾ ಪದಕಗಳು, ಕವಾಯತು ಇವುಗಳನ್ನು ಪರಿಶೀಲಿಸಿ ರಾಜ್ಯಪಾಲರಿಂದ ಪ್ರಮಾಣ ಪತ್ರವನ್ನು ಸ್ವೀಕರಿಸಲು ಆಯ್ಕೆ ಮಾಡಿ ಅವರುಗಳಿಗೆ ಶ್ರೀಮತಿ ಪಿ. ಸರೋಜ ಮತ್ತು ಶ್ರೀಮತಿ ಕೆ.ವಿ. ಶಾಮಲಾರ ತರಬೇತಿಯನ್ನು ನೀಡಿದರು.

ಮಧ್ಯಾಹ್ನದ ಭೋಜನದ ನಂತರ 2.30ಕ್ಕೆ ರಾಜ ಭವನಕ್ಕೆ ತೆರಳಲಾಯಿತು. 3.30ಕ್ಕೆ ಸರಿಯಾಗಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಇವರು ವೇದಿಕೆಗೆ ಆಗಮಿಸಿದರು. ಕೆ.ಎಸ್.ಆರ್.ಪಿ. ಬ್ಯಾಂಡ್ ವೃಂದದವರು ರಾಷ್ಟ್ರಗೀತೆಯನ್ನು ನುಡಿಸಿದರು. ನಂತರ ಸ್ಕೌಟ್-ಗೈಡ್ ಪ್ರಾರ್ಥನೆಯೊಂದಿಗೆ ಪ್ರಶಸ್ತಿ ಪ್ರಧಾನ ಸಮಾರಂಭವು ಪ್ರಾರಂಭವಾಯಿತು.




ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್) ಇವರು ರಾಜ್ಯಪಾಲರು, ವೇದಿಕೆ ಮೇಲೆ ಉಪಸ್ಥಿತರಿರುವ ಗಣ್ಯಮಹನೀಯರನ್ನು ಹಾಗೂ ಸರ್ವರನ್ನೂ ಸ್ವಾಗತಿಸಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ತಮ್ಮ ಪ್ರಸ್ತಾವನಾ ನುಡಿಯಲ್ಲಿ ಚತುರ್ಥ ಚರಣ್ ಕಬ್ಸ್, ಹೀರಕ್ ಪಂಕ್ ಬುಲ್‌ಬುಲ್ಸ್, ರಾಜ್ಯಪುರಸ್ಕಾರ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು 3 ವರ್ಷದಲ್ಲಿ ಪಡೆದ ಅನುಭವ, ಗಳಿಸಿದ ಪ್ರಾವಿಣ್ಯತಾ ಪದಕಗಳು, ಸಲ್ಲಿಸಿದ ಸೇವೆ ಇವುಗಳನ್ನು ತಿಳಿಸಿದರು. 5800ಕ್ಕೂ

ಹೆಚ್ಚು ಮಕ್ಕಳು ರಾಜ್ಯಾದ್ಯಂತ ಪ್ರಶಸ್ತಿಯನ್ನು ಪಡೆದಿದ್ದು, ಇದರಲ್ಲಿ 503 ಕಬ್ಸ್, ಬುಲ್‌ಬುಲ್ಸ್, ಸ್ಕೌಟ್, ಗೈಡ್, ರೋವರ್ಸ್, ರೇಂಜರ್ ರಾಜಭವನದಲ್ಲಿ ಭಾಗವಹಿಸಿರುವುದು ತಮ್ಮಗಳ ಸುದೈವ. ಇನ್ನು ಹೆಚ್ಚಿನದಾಗಿ ಮಕ್ಕಳಿಗೆ ಅಗತ್ಯವಿರುವ ಆಕರ್ಷಕ ಕಾರ್ಯಕ್ರಮ, ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದರು.. ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಯಶಸ್ಸಿಗೆ ಸಹಕರಿಸಿದವರಿಗೆ ಹಾಗೂ ರಾಜ್ಯಪಾಲರಿಗೆ ಅಭಿನಂದಿಸಿ ಧನ್ಯವಾದಗಳನ್ನು ಸಮರ್ಪಿಸಿದರು.

35 ಜಿಲ್ಲೆಗಳಿಂದ ಆಗಮಿಸಿದ ಮಕ್ಕಳ ಪರವಾಗಿ 130 ಕಬ್ಸ್, ಬಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಚತುರ್ಥ ಚರಣ್, ಹೀರಕ್ ಪಂಕ್, ರಾಜ್ಯಪುರಸ್ಕಾರ್ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್, ಇವರಿಂದ ಪ್ರಶಸ್ತಿ ಪತ್ರಗಳನ್ನು ಸ್ವೀಕರಿಸಿದರು.




ಗೌರವಾನ್ವಿತ ರಾಜ್ಯಪಾಲರು ಮಾತನಾಡಿ ಸ್ಕೌಟ್ ಸಂಸ್ಥೆಯು ಬಹಳ ಉತ್ತಮ ಸೇವೆಯನ್ನು ಮತ್ತು ಮಕ್ಕಳಿಗೆ ಮೌಲ್ಯಯುತ ತರಬೇತಿಯನ್ನು ನೀಡುತ್ತಿದೆ. 684 ಕಬ್ಸ್, 1688 ಸ್ಕೌಟ್ಸ್, 166 ರೋವರ್ಸ್, 756 ಬುಲ್‌ಬುಲ್ಸ್, 1910 ಗೈಡ್ಸ್, 262 ರೇಂಜರ್ಸ್‌ಗಳು ರಾಜ್ಯಪ್ರಶಸ್ತಿ ಪಡೆದಿರುವುದು ಅಭಿಮಾನದ ಸಂಗತಿ ಎಂದು ತಿಳಿಸಿ ಅವರುಗಳಿಗೆ ಅಭಿನಂದನೆ ಸಲ್ಲಿಸಿದರು. ಕೋವಿಡ್ ಅವಧಿಯಲ್ಲಿ ಭಾ.ಸ್ಕೌ&ಗೈ ಸಂಸ್ಥೆಯ ಸೇವೆ ಶ್ಲಾಘನೀಯವಾದದ್ದು, ರಾಜ್ಯದ ಮಾಜಿ ಸಚಿವರೂ ಹಾಗೂ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಮತ್ತು ಅವರ ತಂಡ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಅಭಿನಂದಿಸಿದರು. ಮೂಡಬಿದಿರೆಯಲ್ಲಿ ನಡೆದ ಅಂತಾರಾಷ್ಟ್ರೀಯ ಜಾಂಬೂರಿಯ ವ್ಯವಸ್ಥೆ, ಕಾರ್ಯಕ್ರಮಗಳು, ಚಟುವಟಿಕೆಗಳು, ಅದ್ಭುತವಾದ ಅನುಭವಗಳನ್ನು ಮಕ್ಕಳಿಗೆ ನೀಡಿದೆ, 50,000ಕ್ಕೂ ಹೆಚ್ಚು ಸ್ಕೌಟ್ಸ್–ಗೈಡ್ಸ್‌ಗಳ ಕಾರ್ಯಕ್ರಮ ಅಪೂರ್ವವಾದದ್ದು ಎಂದು ಹರ್ಷವನ್ನು ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ಉಪಾಧ್ಯಕ್ಷರು, ಶ್ರೀ ಎಂ.ಎ ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್), ಶ್ರೀಮತಿ ಗೀತಾನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮತ್ತು ರಾಜ್ಯ ಪದಾಧಿಕಾರಿಗಳು ಭಾಗವಹಿಸಿದ್ದರು. ಕೊನೆಯಲ್ಲಿ ಶ್ರೀಮತಿ ಗೀತಾನಟರಾಜ್, ರಾಜ್ಯ ಆಯುಕ್ತರು (ಗೈ) ರಾಜ್ಯಪಾಲರಿಗೂ, ಆಗಮಿಸಿದ ಕರ್ನಾಟಕ ಸರ್ಕಾರದ ಅಧಿಕಾರಿಗಳಿಗೂ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಪದಾಧಿಕಾರಿಗಳಿಗೆ ಸ್ಕೌಟರ್ಸ್, ಗೈಡರ್ಸ್, ಮಕ್ಕಳಿಗೆ ಪ್ರೋಕ್ಷಕರುಗಳಿಗೆ ದೂರದರ್ಶನ ಹಾಗೂ ಪತ್ರಿಕಾ ಪ್ರತಿನಿಧಿಗಳಿಗೆ ವಂದನೆಗಳನ್ನು ಸಮರ್ಪಿಸಿದರು.

ಕೆ.ಎಸ್.ಆರ್.ಪಿ. ಅವರ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.





# ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ



ಫೆಬ್ರವರಿ 08 ರಂದು "ಕೊಂಡಜ್ಜಿ ಬಸಪ್ಪ ಸಭಾಂಗಣ", ಶಾಂತಿಗೃಹ, ಬೆಂಗಳೂರು ಇಲ್ಲಿ 7ನೇ ವರ್ಷದ ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಮಾರಂಭದ ಉದ್ಘಾಟನೆಯನ್ನು ಶ್ರೀಮತಿ ಶಮಿತಾ ಮಲ್ನಾಡ್, ಖ್ಯಾತಗಾಯಕಿ, ಬೆಂಗಳೂರು ಇವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿ ತಮ್ಮ ಉದ್ಘಾಟನಾ ಭಾಷಣದಲ್ಲಿ ಸಂಗೀತದ ಮಹತ್ವ ಹಾಗೂ ಹಾಡುಗಾರಿಕೆಯಿಂದ ಮಕ್ಕಳಲ್ಲಿ ಉಂಟಾಗುವ ಏಕಾಗ್ರತೆ, ದೇಶಭಕ್ತಿ, ಸಂತೋಷ ಮತ್ತು ಉಲ್ಲಾಸದ ಬಗ್ಗೆ ಮಾತನಾಡಿ, ಪ್ರತಿಯೊಬ್ಬ ತಂದೆ–ತಾಯಿಗಳು ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರಹೊಮ್ಮಿಸಲು ಅವಕಾಶವನ್ನು ನೀಡಬೇಕು. ನಾನು ಗೈಡ್ ಆಗಿ ಉತ್ತಮ ಕೌಶಲ್ಯಗಳನ್ನು ಕಲಿತು, ಡೆಂಟಲ್ ಡಾಕ್ಟರ್ ಆದರೂ ಕೂಡ ಹಾಡುಗಾರಿಕೆಯಲ್ಲಿ ನನಗೆ ಹೆಚ್ಚು ಒಲವು ಎಂದು ತಿಳಿಸಿದರು.

ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಉದ್ಘಾಟನಾ ಸಮಾರಂಭದ ಅಧ್ಯಕ್ಷೀಯ ನುಡಿಯಲ್ಲಿ ಗೀತಗಾಯನ ಸ್ಪರ್ಧೆಯ ಹಿನ್ನೆಲೆ ಮತ್ತು ಸಂಗೀತದಿಂದ ಮಕ್ಕಳ ಮನೋವಿಕಾಸದ ಬಗ್ಗೆ ತಿಳಿಸಿ ಉಪಸ್ಥಿತರಿದ್ದ ತೀರ್ಪುಗಾರರಿಗೆ ಗೌರವಿಸಿ ಶುಭಕೋರಿದರು.

ಸ್ಪರ್ಧೆಯಲ್ಲಿ ರಾಜ್ಯದ 15 ಜಿಲ್ಲೆಗಳಿಂದ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ಲೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆಗಳಲ್ಲಿ ಹಾಡಿ ವಿಜೇತರಾದ ಮಕ್ಕಳು, ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ವಿಜೇತರಾದವರು ರಾಜ್ಯ ಮಟ್ಟದಲ್ಲಿ ಭಾಗವಹಿಸಿದ್ದರು. ಒಟ್ಟು 15 ಜಿಲ್ಲೆಗಳಿಂದ 280 ಮಕ್ಕಳು ವೇಷಭೂಷಣಗಳೊಂದಿಗೆ, ಉತ್ತಮ ತಯಾರಿ ನಡೆಸಿ ಕರೋಕೆ ಹಾಗೂ ವಾದ್ಯಗಳೊಂದಿಗೆ ಭಾಗವಹಿಸಿದ್ದರು.

ಸಂಜೆ ಸಮಾರೋಪ ಸಮಾರಂಭದಲ್ಲಿ ಡಾ|| ಗೊ.ರು. ಚನ್ನಬಸಪ್ಪ, ನಾಡೋಜ ಪ್ರಶಸ್ತಿ ಪುರಸ್ಕೃತರು, ಮಾತನಾಡಿ "ಸಂಗೀತದಿಂದ ಗಿಡಗಳು ಬೆಳೆಯುತ್ತವೆ. ಸಂಗೀತದಿಂದ ಮಕ್ಕಳ ವ್ಯಕ್ತಿತ್ವ ವಿಕಸನವಾಗಿ ಮಾನಸಿಕವಾಗಿ ಸದೃಢರಾಗಲು ಈ ಗೀತಗಾಯನ ಬಹಳ ಅವಶ್ಯವಾದದ್ದು. ಸುಮಧುರ ಹಾಡು ಎಲ್ಲವನ್ನು ಆಕರ್ಷಿಸುವಂತೆ, ನೀವೂ ಕೌಶಲ್ಯಗಳಿಂದ ಆಕರ್ಷಿಸಿ ಉತ್ತಮ ನಾಗರಿಕರಾಗಿ" ಎಂದು ಹಾರೈಸಿದರು.

ಶ್ರೀಮತಿ ನಿರ್ಮಲಾ ಎಲಿಗಾರ್, ನಿರ್ದೇಶಕರು, ದೂರದರ್ಶನ, ಬೆಂಗಳೂರು ಇವರು ಅತಿಥಿಗಳಾಗಿ ಭಾಗವಹಿಸಿ, ಮಕ್ಕಳ ಪ್ರತಿಭೆಯನ್ನು ಹೊರಹೊಮ್ಮಿಸಲು, ಶಿಕ್ಷಕರು ಮತ್ತು ಪೋಷಕರು ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹವನ್ನು ನೀಡಿ ಅದನ್ನು ಪೋಷಿಸುವುದು ಬಹಳ ಅಗತ್ಯ ಎಂದು ವಿಜೇತರನ್ನು ಅಭಿನಂದಿಸಿದರು.



ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರು ಮಾತನಾಡಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್– ಗೈಡ್ಸ್, ರೋವರ್ಸ್–ರೇಂಜರ್ಸ್ ಇರುವರೆಗಿನ ಎಲ್ಲಾ ಗೀತಗಾಯನ ವಿಜೇತರನ್ನು ಸೇರಿಸಿ ಒಂದು ಸಮಾವೇಶವನ್ನು ಮಾಡಿ ಅವರುಗಳ ಅಭಿಪ್ರಾಯವನ್ನು ಸಂಗ್ರಹಿಸಿ ಇನ್ನು ಉತ್ತಮ ವೇದಿಕೆಯನ್ನು ಕಲ್ಪಿಸುವಲ್ಲಿ ಪ್ರಯತ್ನಿಸೋಣ ಎಂದು ತಿಳಿಸಿದರು.

ಜಾನಪದ ಗೀತಗಾಯನವನ್ನು ನಾಡೋಜ ಡಾ॥ ಗೊ.ರು. ಚನ್ನಸಪ್ಪ ಇವರಿಗೆ ಸಮರ್ಪಣೆ ಮಾಡಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಇದರ ಹೆಸರಿನಲ್ಲಿ ನಡೆಸಲಾಯಿತು. ಶ್ರೀಮತಿ ಜೆ.ಯು. ರೇಣುಕಾ, ಶ್ರೀಮತಿ ಗಾಯತ್ರಿ ಹಂಪ್ಲಿ, ಶ್ರೀಮತಿ ವಿಜಯಕುಮಾರಿ ಆರ್, ಶ್ರೀಮತಿ ಭುವನೇಶ್ವರಿ, ಶ್ರೀಮತಿ ರೇಖಾ ನಿರಂಜನ್, ಶ್ರೀಮತಿ ಮುಕ್ತಾ ಕಾಗಲೆ ಇವರುಗಳು ತೀರ್ಪುಗಾರರಾಗಿ ಆಗಮಿಸಿದ್ದರು.

ಶ್ರೀ ಕೊಂಡಜ್ಜಿ ಬಿ. ಷಣ್ಮುಖಪ್ಪ, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ವಿಜೇತ ಮಕ್ಕಳನ್ನು ಅಭಿನಂದಿಸಿ, ಶುಭಾಶಯಗಳನ್ನು ಕೋರಿದರು.

| | | |
|---|---|---|
| ಕಬ್ ವಿಭಾಗ ವಿಜೇತರು (ವೈಯಕ್ತಿಕ) : | ಪ್ರಥಮ ಸ್ಥಾನ – | ಕು॥ ಆಯುಷ್, ಉಡುಪಿ ಜಿಲ್ಲೆ |
| | ದ್ವಿತೀಯ ಸ್ಥಾನ – | ಕು॥ ಅಶ್ವಿನ್, ದಕ್ಷಿಣ ಕನ್ನಡ ಜಿಲ್ಲೆ |
| | ತೃತೀಯ ಸ್ಥಾನ – | ಕು॥ ರಿಗ್ವೇದ್ ಕೆ, ಬೆಂಗಳೂರು ದಕ್ಷಿಣ |
| ಬಲ್‌ಬುಲ್ ವಿಭಾಗ ವಿಜೇತರು (ವೈಯಕ್ತಿಕ) : | ಪ್ರಥಮ ಸ್ಥಾನ – | ಕು॥ ಚೈತ್ರ ಪೈ, ಉಡುಪಿ ಜಿಲ್ಲೆ |
| | ದ್ವಿತೀಯ ಸ್ಥಾನ – | ಕು॥ ತೇಜಸ್ವಿ, ದಾವಣಗೆರೆ ಜಿಲ್ಲೆ |
| | ತೃತೀಯ ಸ್ಥಾನ – | ಕು॥ ಹಂಸ್ವಿ, ಶಿವಮೊಗ್ಗ ಜಿಲ್ಲೆ |
| ಸ್ಕೌಟ್ ವಿಭಾಗ ವಿಜೇತರು (ಗುಂಪು) : | ಪ್ರಥಮ ಸ್ಥಾನ – | ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆ, ದಕ್ಷಿಣ ಕನ್ನಡ ಜಿಲ್ಲೆ |
| | ದ್ವಿತೀಯ ಸ್ಥಾನ – | ಸುರಾನ ವಿದ್ಯಾಲಯ, ಸೂರ್ಯಸಿಟಿ ಬೆಂಗಳೂರು ಪೂರ್ವ ಜಿಲ್ಲೆ |
| | ತೃತೀಯ ಸ್ಥಾನ – | ಕ್ರೈಸ್ಟ್ ಕಿಂಗ್ ಶಾಲೆ, ಉಡುಪಿ ಜಿಲ್ಲೆ |
| ಗೈಡ್ ವಿಭಾಗ ವಿಜೇತರು (ಗುಂಪು) : | ಪ್ರಥಮ ಸ್ಥಾನ – | ಎಂ.ಇ.ಎಸ್. ಪಬ್ಲಿಕ್ ಶಾಲೆ, ಯಲಹಂಕ, ಬೆಂಗಳೂರು ಉತ್ತರ ಜಿಲ್ಲೆ. |
| | ದ್ವಿತೀಯ ಸ್ಥಾನ – | ವಿದ್ಯಾವರ್ಧಕ ಶಾಲೆ, ಶಿರ್ವ, ಉಡುಪಿ ಜಿಲ್ಲೆ |
| | ತೃತೀಯ ಸ್ಥಾನ – | ಜೈನ್ ಪಬ್ಲಿಕ್ ಶಾಲೆ, ಶಿವಮೊಗ್ಗ ಜಿಲ್ಲೆ |
| ರೋವರ್ ವಿಭಾಗ ವಿಜೇತರು (ವೈಯಕ್ತಿಕ) : | ಪ್ರಥಮ ಸ್ಥಾನ – | ಶ್ರೀ ಪ್ರಶಾಂತ್, ದಕ್ಷಿಣ ಕನ್ನಡ ಜಿಲ್ಲೆ |
| | ದ್ವಿತೀಯ ಸ್ಥಾನ – | ಶ್ರೀ ವರುಣ್ ಎಂ. ಶೆಟ್ಟಿ, ಶಿವಮೊಗ್ಗ ಜಿಲ್ಲೆ |
| | ತೃತೀಯ ಸ್ಥಾನ – | ಶ್ರೀ ಶಿವಶಂಕರ್, ಕಲಬುರಗಿ ಜಿಲ್ಲೆ |
| ರೇಂಜರ್ ವಿಭಾಗ ವಿಜೇತರು (ವೈಯಕ್ತಿಕ) : | ಪ್ರಥಮ ಸ್ಥಾನ – | ಕು॥ ಹಿತಶ್ರೀ, ದಕ್ಷಿಣ ಕನ್ನಡ ಜಿಲ್ಲೆ |
| | ದ್ವಿತೀಯ ಸ್ಥಾನ – | ಕು॥ ರಚನ, ಶಿವಮೊಗ್ಗ ಜಿಲ್ಲೆ |
| | ತೃತೀಯ ಸ್ಥಾನ – | ಕು॥ ಪ್ರಿಯಾಂಕ, ಬಳ್ಳಾರಿ ಜಿಲ್ಲೆ |

ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಪ್ರಮಾಣ ಪತ್ರ, ಸಿಂಗರ್ ಬ್ಯಾಡ್ಜ್, ನೆನಪಿನ ಕಾಣಿಕೆ ನೀಡಲಾಯಿತು. ವಿಜೇತ ಸ್ಪರ್ಧಿಗಳಿಗೆ ಪ್ರಥಮ ಬಹುಮಾನವಾಗಿ ತಲಾ ರೂ.1000/–; ದ್ವಿತೀಯ ಬಹುಮಾನವಾಗಿ ರೂ.800/–; ಹಾಗೂ ತೃತೀಯ ಬಹುಮಾನವಾಗಿ ರೂ.600/–ಗಳನ್ನು ನೀಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ರೇಣುಕ, ಸಾಹಿತಿಗಳು ಇವರು ಶಿಕ್ಷಕರುಗಳಿಗೆ "ಸೀಸ" ಪುಸ್ತಕವನ್ನು ಉಚಿತವಾಗಿ ನೀಡಿದರೆ, ಶ್ರೀಮತಿ ರೇಖಾ ನಿರಂಜನ್ ಇವರು ವಿಜೇತ ಮಕ್ಕಳಿಗೆ ಪೌಚ್ ಮತ್ತು ಚಾಕೊಲೇಟ್ ನೀಡುವ ಮೂಲಕ ಮಕ್ಕಳನ್ನು ಅಭಿನಂದಿಸಿದರು.

ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್), ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಬಿ.ಕೆ. ಬಸವರಾಜ, ರಾಜ್ಯ ಜಂಟಿ ಕಾರ್ಯದರ್ಶಿ (ಸ್ಕೌಟ್ಸ್), ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಜಂಟಿ ಕಾರ್ಯದರ್ಶಿ (ಗೈಡ್ಸ್) ಹಾಗೂ ರಾಜ್ಯ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.









# ಹವಾಮಾನ ಮತ್ತು ಪರಿಸರ ಶಿಕ್ಷಣ ತರಬೇತಿ

ದಿನಾಂಕ 9 ಮತ್ತು 10 ಫೆಬ್ರುವರಿ 2023ರಂದು ಕಲ್ಯಾಣ ಕರ್ನಾಟಕ ವಿಭಾಗದ ಉಪನ್ಯಾಸಕಿಯರಿಗೆ ಮತ್ತು ಉಪನ್ಯಾಸಕರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆ ಹಾಗೂ ಪರಿಸರ ಶಿಕ್ಷಣ ಕೇಂದ್ರ ಮತ್ತು ಯೂನಿಸೆಫ್ ಸಂಸ್ಥೆ ಸಹಯೋಗದಲ್ಲಿ ಹವಾಮಾನ ಮತ್ತು ಪರಿಸರ ಶಿಕ್ಷಣ ತರಬೇತಿ ಕುರಿತು ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ ಡಾ. ಆನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರಾಜ್ಯ ಪ್ರಧಾನ ಆಯುಕ್ತರು, ಇವರು ಮಾತನಾಡಿ "ಪ್ರಕೃತಿ ಎಂಬುದು ದೇವರು ಮಾನವನಿಗೆ ನೀಡಿದವರ ಅತ್ಯಂತ ಅಮೂಲ್ಯವಾದುದು ಅದನ್ನು ಹಾಳು ಮಾಡದೇ ಹೇಗೆ ರಕ್ಷಿಸಿಕೊಳ್ಳಬೇಕೆಂಬುದನ್ನು ತಿಳಿದುಕೊಂಡು ನಿಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಕೃತಿ ಮತ್ತು ಪರಿಸರವನ್ನು ರಕ್ಷಿಸುವಂತೆ" ತಿಳಿಸಬೇಕೆಂದರು ಮತ್ತು ಈ ಕಾರ್ಯಕ್ರಮವನ್ನು ನಡೆಸಲು ಯೂನಿಸೆಫ್ ಮತ್ತು ಸಿ.ಇ.ಇ ಸಂಸ್ಥೆಗಳು ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರವನ್ನು ನೀಡಿವೆ ಆ ಸಂಸ್ಥೆಯ ಅಧಿಕಾರಿಗಳಾದ ಶ್ರೀ ವೆಂಕಟೇಶ್ ಶ್ರೀ ಹರಳಿಕಟ್ಟಿ, ಶ್ರೀ ಪ್ರಭಾತ್ ಕಲ್ಕೂರ್ ಇವರಿಗೆ ಕೃತಜ್ಞತೆಯನ್ನು ತಿಳಿಸುತ್ತೇನೆಂದರು. ಶ್ರೀ ವೆಂಕಟೇಶ್ ಹರಳಿಕಟ್ಟಿ ಇವರು ಕಾರ್ಯಕ್ರಮದ ಕುರಿತು ಪ್ರಸ್ತಾವಿಕ ಮಾತುಗಳನ್ನಾಡಿದರು. ಈ ಸಂದರ್ಭದಲ್ಲಿ ಯೂನಿಸೇಫ್ ಸಂಸ್ಥೆಯ ಶ್ರೀ ಮನಿಷ್ ವಾಸುಜಾ, ಶ್ರೀ ಸುಜಯ್ ಮಜೂಂಧಾರ್, ಶ್ರೀ ದಿಲೀಪ್ ಶರ್ಮಾ, ಸಿ.ಇ.ಇ ಸಂಸ್ಥೆಯ, ಶ್ರೀಮತಿ ರೇಜಿನಿ ಸಿಂಪ್ಸನ್, ಶ್ರೀ ನಾಗರಾಜ್, ಜಿಲ್ಲಾ ಮುಖ್ಯ ಆಯುಕ್ತರು, ಬೆಂಗಳೂರು ಗ್ರಾಮಾಂತರ, ಶ್ರೀಮತಿ ಅರುಣಾ ಮಾಲಾ, ಎಸ್.ಜಿ.ವಿ ಅರುಣ್ ಸೇರಿದಂತೆ ಇತರರಿದ್ದರು. ಈ ಕಾರ್ಯಕ್ರಮದಲ್ಲಿ ಹವಾಮಾನ ವೈಪರಿತ್ಯ ಬದಲಾವಣೆ, ಪ್ರಕೃತಿ ಸಂರಕ್ಷಣೆ ಮತ್ತು ವಿಪತ್ತು ನಿರ್ವಹಣೆ ಸೇರಿದಂತೆ ಇತರೆ ವಿಷಯಗಳ ಬಗ್ಗೆ ತರಬೇತಿಯನ್ನು ನೀಡಲಾಯಿತು.

ಫೆಬ್ರವರಿ 01 ರಂದು ನಗರದ ನಿಮ್ಹಾನ್ಸ್ ಆಸ್ಪತ್ರೆಯ ಖ್ಯಾತ ನರರೋಗ ತಜ್ಞರಾದ ಡಾ. ಗಿರೀಶ್ ಇವರು ಫಿಟ್ಸ್ ಸೇರಿದಂತೆ ನರಗಳ ವಿವಿಧ ಕಾಯಿಲೆಗಳ ಬಗ್ಗೆ ತಿಳಿಸಿಕೊಟ್ಟರು. ವಿಪತ್ತು ನಿರ್ವಹಣಾ ಪರಿಣಿತರಾದ ಶ್ರೀ ಪ್ರಭಾತ್ ಕಲ್ಕೂರು ಕಾರ್ಯಕ್ರಮವನ್ನು ನಿರೂಪಿಸಿದರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕಲ್ಯಾಣ ಕರ್ನಾಟಕ ಉಸ್ತುವಾರಿಗಳಾದ ಶ್ರೀಮತಿ ಮಲ್ಲೇಶ್ವರಿ ಜುಜಾರೆ ಸ್ವಾಗತಿಸಿದರು. ಈ ತರಬೇತಿಯಲ್ಲಿ ಬಳ್ಳಾರಿ ಜಿಲ್ಲೆಯಿಂದ 28, ರಾಯಚೂರು ಜಿಲ್ಲೆಯಿಂದ 25, ಬೀದರ್ ಜಿಲ್ಲೆಯಿಂದ 19, ಯಾದಗಿರಿ ಜಿಲ್ಲೆಯಿಂದ 13, ಕೊಪ್ಪಳ ಜಿಲ್ಲೆಯಿಂದ 12, ಕಲಬುರಗಿ ಜಿಲ್ಲೆಯಿಂದ 05 ಸೇರಿದಂತೆ ಒಟ್ಟು 102 ಉಪನ್ಯಾಸಕ ಉಪನ್ಯಾಸಕೀಯರು ಭಾಗವಹಿಸಿದ್ದರು. ಶ್ರೀಮತಿ ಮಲ್ಲೇಶ್ವರಿ ಜೂಜಾರೆ, ಎ.ಎಸ್.ಒ.ಸಿ, ಬಳ್ಳಾರಿ ಇವರು ಕಾರ್ಯಕ್ರಮದ ಜವಾಬ್ದಾರಿ ವಹಿಸಿದ್ದರು.





# ಜಿಲ್ಲಾ ವಾರ್ತೆಗಳು

## ಬೀದರ

ಸ್ವಾಮಿ ವಿವೇಕಾನಂದರ ಜನ್ಮ ದಿನದ ಕಾರ್ಯಕ್ರಮವನ್ನು (ಯುವ ದಿನಾಚರಣೆ) ಜನವರಿ 02 ರಂದು ಬೀದರ್ ತಾಲ್ಲೂಕಿನ ಅಣದೂರ ನೈಟಿಂಗೆಲ್ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಲಾಯಿತು. ಮುಖ್ಯ ಅತಿಥಿಯಾಗಿ ಭಾಗವಹಿಸಿದ. ಶ್ರೀ ಕುಮಾರ್ ಚೇತನ್ ಸೊರಳ್ಳಿ, ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರು, ವಿವೇಕಾನಂದ ಅವರನ್ನು ಕುರಿತು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳು ಶ್ರೀಮತಿ ಅಬಿಕಾ ಜವಳೆ, ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಶಾಲೆಯ ಶಿಕ್ಷಕರು ಭಾಗವಹಿಸಿದ್ದರು. ಶ್ರೀ ದೇವಿಂದ್ರಪ್ಪ ಸ್ವಾಗತಿಸಿದರು. ಶ್ರೀಮತಿ ಸಂತೋಷ ಶಿಕ್ಷಕಿ ವಂದಿಸಿದರು.



## ಬೆಳಗಾವಿ

ಜನವರಿ 26 ರಂದು 74ನೇ ಗಣರಾಜ್ಯೋತ್ಸವದ ಅಂಗವಾಗಿ ಚಿಕ್ಕೋಡಿ ನಗರದ ಆರ್.ಡಿ. ಪ್ರೌಢಶಾಲೆಯ ಮೈದಾನದಲ್ಲಿ ನಡೆದ ಸಾಮೂಹಿಕ ಪಥಸಂಚಲನದಲ್ಲಿ ನಗರದ ಶಾಸಕರ ಕ್ಷೇತ್ರದ ಮಾದರಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಲ್ಪನಾ ಚಾವ್ಲಾ ಗೈಡ್ ತಂಡವು ಪ್ರಥಮ ಸ್ಥಾನ ಪಡೆದುಕೊಂಡು, ತಂಡಕ್ಕೆ ಮಾನ್ಯ ಶಾಸಕರಾದ ಶ್ರೀ ಗಣೇಶ್, ಮಾಜಿ ಸಂಸದರಾದ ಶ್ರೀ ಪ್ರಕಾಶ ಹುಕ್ಕೇರಿ, ಪೋಲೀಸ್ ಅಧೀಕ್ಷಕರು ಶ್ರೀ ಮಾಧವ ಗಿತ್ತೇ, ತಹಶೀಲ್ದಾರ ಶ್ರೀ ಸಿ.ಎಸ್. ಕುಲಕರ್ಣಿ, ಉಪನಿರ್ದೇಶಕರು (ಆ) ಶ್ರೀ. ಮೋಹನ್ ಕುಮಾರ್ ಹಂಚಾಟೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಪ್ರಕಾಶ್ ಹಿರೇಮಠ ಇವರುಗಳ ಉಪಸ್ಥಿತಿಯಲ್ಲಿ ಬಹುಮಾನ ವಿತರಿಸಲಾಯಿತು. ಪಥಸಂಚಲನ ತಯಾರಿಗೆ ಶಾಲೆಯ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಶೈಲಶ್ರೀ ಜೋಶಿ ಶ್ರಮವಹಿಸಿದ್ದಾರೆ. ಪ್ರಧಾನ ಗುರುಮಾತೆ. ಶ್ರೀಮತಿ ಜಂಬಗಿ, ದೈಹಿಕ ಶಿಕ್ಷಣ ಶಿಕ್ಷಕಿ ಶ್ರೀಮತಿ ಕಲ್ಯಾಣಿ ಇವರು ಸಹಕರಿಸಿದ್ದಾರೆ. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎನ್.ಜಿ. ಪಾಟೀಲ ಉಪಸ್ಥಿತರಿದ್ದರು.



## ಬೆಂಗಳೂರು ಗ್ರಾಮಾಂತರ

ಜನವರಿ 07 ರಂದು ಶ್ರೀ ಲೋಟಸ್ ಪಬ್ಲಿಕ್ ಶಾಲೆ, ತಾವರೆಕೆರೆ, ಹೊಸಕೋಟೆ ತಾಲ್ಲೂಕು ಇಲ್ಲಿಗೆ ಭೇಟಿ ನೀಡಿ 2002–23ನೇ ಸಾಲಿಗೆ ನೂತನ ಕಬ್, ಬುಲ್, ಸ್ಕೌಟ್–ಗೈಡ್ ದಳಗಳ ನೋಂದಣಿ ಕಾರ್ಯ ನಡೆಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಲಲಿತಮ್ಮ ಹಾಗೂ ಶ್ರೀ ಅರುಣ್‌ಕುಮಾರ್ ಹೆಚ್.ಕೆ., ಸ್ಕೌಟ್ಸ್–ಗೈಡ್ಸ್ ಸ್ವಯಂಸೇವಕರು ಹಾಗೂ ಇತರರು ಉಪಸ್ಥಿತರಿದ್ದರು.

* ಜನವರಿ 16 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆಯ ವತಿಯಿಂದ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಭಾಗವಹಿಸಿದ ಶಾಲೆಗಳ ಶಾಲಾ ಮುಖ್ಯಸ್ಥರು ಹಾಗೂ ದಳನಾಯಕ, ನಾಯಕಿಯರ ಅಭಿನಂದನಾ ಸಮಾರಂಭವನ್ನು ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಅಭಿನಂದನಾ ಸಮಾರಂಭಕ್ಕೆ ಮುಖ್ಯ







ಅತಿಥಿಗಳಾಗಿ ಶ್ರೀಯುತ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಆಗಮಿಸಿದ್ದರು. ಶ್ರೀ ಶ್ರೀಕಂಠ, ಉಪನಿರ್ದೇಶಕರು (ಆಡಳಿತ) ಹಾಗೂ ಉಪಾಧ್ಯಕ್ಷರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಜಾಂಬೂರಿಯಲ್ಲಿ 960 ವಿದ್ಯಾರ್ಥಿಗಳು ಹಾಗೂ 71 ಶಿಕ್ಷಕರು ಭಾಗವಹಿಸಲು ತಮ್ಮ ಸಂಪೂರ್ಣ ಸಹಕಾರವನ್ನು ನೀಡಿದ ಶ್ರೀ ಶ್ರೀಕಂಠ, ಉಪನಿರ್ದೇಶಕರು (ಆಡಳಿತ), ಜಾಂಬೂರಿಗೆ ತರಕಾರಿಯನ್ನು ನೀಡಿ ಸಹಕರಿಸಿದ ದಾನಿಗಳಾದ ಶ್ರೀ ಓಬದೇನಹಳ್ಳಿ ಮುನಿಯಪ್ಪ, ಶಾಲೆಗಳಿಂದ ತಮ್ಮ ಮಕ್ಕಳನ್ನು ಕಳುಹಿಸಿಕೊಟ್ಟ ಶಾಲಾ ಮುಖ್ಯಸ್ಥರುಗಳು ಹಾಗೂ ಜವಾಬ್ದಾರಿಯುತವಾಗಿ ಮಕ್ಕಳನ್ನು ಜಾಂಬೂರಿಗೆ ಕರೆ ತಂದಿದ್ದ ದಳನಾಯಕ, ನಾಯಕಿಯನ್ನು ಜಿಲ್ಲಾ ಸಂಸ್ಥೆಯ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ನಾಗರಾಜ, ಜಿಲ್ಲಾ ಮುಖ್ಯ ಅಯುಕ್ತರು, ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌ), ಶ್ರೀಮತಿ ಮಂಜುಳಾ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈ), ಶ್ರೀ ನಾಗೇಶ್ ಆರ್. ಶಿವಪುರ, ರಾಜ್ಯ ತರಬೇತಿ ಆಯುಕ್ತರು (ಸ್ಕೌ), ಶ್ರೀಮತಿ ಕೆ.ವಿ. ಶ್ಯಾಮಲಾ, ರಾಜ್ಯ ತರಬೇತಿ ಆಯುಕ್ತರು (ಗೈ), ಶ್ರೀಮತಿ ಅರುಣಮಾಲಾ, ಸಹಾಯಕ ರಾಜ್ಯ ತರಬೇತಿ ಆಯುಕ್ತರು (ಗೈ), ಸ್ಕೌಟ್–ಗೈಡ್ ಸ್ವಯಂಸೇವಕರು, ಇತರ ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ದಳನಾಯಕು, ನಾಯಕಿಯರು ಹಾಗೂ ಇತರರು ಉಪಸ್ಥಿತರಿದ್ದರು.

* ಜನವರಿ 28 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆಯ ಹೊಸಕೋಟೆ ಸ್ಥಳೀಯ ಸಂಸ್ಥೆಯ ವತಿಯಿಂದ ರಾಷ್ಟ್ರೀಯ ಯುವ ದಿನಾಚರಣೆ ಮತ್ತು ಡಾ॥ ಬಿ.ಆರ್. ಅಂಬೇಡ್ಕರ್ ರೋವರ್ ಮುಕ್ತ ದಳ ಉದ್ಘಾಟನಾ ಕಾರ್ಯಕ್ರಮವನ್ನು ಜಿ.ಜಿ.ಎಂ.ಎಸ್. ಶಾಲೆ, ಹೊಸಕೋಟೆ ಟೌನ್ ಇಲ್ಲಿ ಆಯೋಜಿಸಲಾಯಿತು. ಶ್ರೀ ನಾಗರಾಜು, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಸ್ಥಳೀಯ ಸಂಸ್ಥೆ ಅಧ್ಯಕ್ಷರು ಮುಕ್ತ ದಳದ ಉದ್ಘಾಟನೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

* ಜನವರಿ 31 ರಂದು ರಾಜ್ಯ ಸಂಸ್ಥೆಯಿಂದ ನೀಡಲ್ಪಟ್ಟ 2023ನೇ ಸಾಲಿನ ನೂತನ ಕ್ಯಾಲೆಂಡರ್‌ನ್ನು ಶ್ರೀಮತಿ ಆರ್. ಲತಾ, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಅಧ್ಯಕ್ಷರು ಭಾರತ್ ಸ್ಕೌಟ್ಸ್–ಗೈಡ್ಸ್ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಶ್ರೀ ಶ್ರೀಕಂಠ, ಮಾನ್ಯ ಉಪನಿರ್ದೇಶಕರು (ಆಡಳಿತ) ಮುಖಾಂತರ ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ರಾಜಮ್ಮ ಪ್ರಕಾಶ್ ಜಿಲ್ಲಾ ಉಪಾಧ್ಯಕ್ಷರು, ಶ್ರೀ ನಾಗರಾಜ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಬಿ.ಕೆ. ಮೋಹನ್ ಬಾಬು, ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಡಿ. ಶ್ರೀನಿವಾಸ್ ಪ್ರಸಾದ್, ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



## ಅಭಿನಂದನೆಗಳು



ಮಂಗಳೂರಿನ ಎ. ಶ್ಯಾಮರಾವ್ ಪ್ರತಿಷ್ಠಾನವು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ರೌಢಶಾಲಾ ವಿಭಾಗ ಹಾಗೂ ಪದವಿ ಪೂರ್ವ ವಿಭಾಗದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಗುರುತಿಸಿ ಪ್ರತಿಷ್ಠಿತ ಎ. ಶಾಮರಾವ್ ಸ್ಮಾರಕ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡುತ್ತಿದ್ದು, 2022ರ ಸಾಲಿನ ಈ ಪ್ರಶಸ್ತಿಗೆ ಭಾರತ್ ಸ್ಕೌಟ್–ಗೈಡ್ಸ್ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಜಿಲ್ಲಾ ತರಬೇತಿ ಆಯುಕ್ತರು ಹಾಗೂ ಶ್ರೀ ಭಾರತಿ ಶಿಕ್ಷಣ ಸಮೂಹ ಸಂಸ್ಥೆಯ ದೈಹಿಕ ಶಿಕ್ಷಣ **ಶ್ರೀ ಪ್ರತಿಮ್ ಕುಮಾರ್ ಕೆ.ಎಸ್.** ಅವರು ಆಯ್ಕೆಯಾಗಿದ್ದಾರೆ. ಅವರಿಗೆ ವಳಚ್ಚಿಲ್ ಶ್ರೀ ಶ್ರೀನಿವಾಸ್ ಶೈಕ್ಷಣಿಕ ಆವರಣದಲ್ಲಿ ಫೆಬ್ರವರಿ 14 ರಂದು ಎ. ಶ್ಯಾಮರಾವ್ ಪ್ರತಿಷ್ಠಾನದ ಅಧ್ಯಕ್ಷರು ಹಾಗೂ ಶ್ರೀನಿವಾಸ ಯುನಿವರ್ಸಿಟಿಯ ಕುಲಪತಿ ಡಾ. ಸಿ.ಎ.ಎ. ರಾಘವೇಂದ್ರರಾವ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಎ. ಶ್ಯಾಮರಾವ್ ಪ್ರತಿಷ್ಠಾನದ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.

–ರಾಜ್ಯ ಕಾರ್ಯದರ್ಶಿ

## ಬೆಂಗಳೂರು ದಕ್ಷಿಣ

ಬೆಂಗಳೂರು ದಕ್ಷಿಣ ಜಿಲ್ಲೆಯ ವಿಜಯನಗರ ಸ್ಥಳೀಯ ಸಂಸ್ಥೆಯ ವತಿಯಿಂದ ವಾರ್ಷಿಕ ರ್‍ಯಾಲಿಯನ್ನು ಬಿ.ಎಸ್.ಆರ್.ಎನ್.ಎಸ್. ಶಾಲೆ ಯುನಿಟ್–2ರಲ್ಲಿ ಆಯೋಜನೆ ಮಾಡಲಾಯಿತು. ರ್‍ಯಾಲಿಯಲ್ಲಿ 62 ಕಬ್, 74 ಬುಲ್–ಬುಲ್, 307 ಸ್ಕೌಟ್ಸ್, 190 ಗೈಡ್ಸ್, 31 ದಳ ನಾಯಕರುಗಳು ಭಾಗವಹಿಸಿದರು. ರ್‍ಯಾಲಿಯಲ್ಲಿ ಸ್ಥಳಿಯ ಸಂಸ್ಥೆಯಲ್ಲಿ ದೀರ್ಘಾವಧಿ ಸೇವೆಯನ್ನು ಸಲ್ಲಿಸಿದ ಸ್ಕೌಟ್ಸ್ ಮಾಸ್ಟರ್–ಗೈಡ್ಸ್ ಕ್ಯಾಪ್ಟನ್‌ಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ರ್‍ಯಾಲಿಯಲ್ಲಿ ಶ್ರೀ ರಾಮಲಿಂಗರೆಡ್ಡಿ ಸ್ಥಳಿಯ ಸಂಸ್ಥೆಯ ಉಪಾಧ್ಯಕ್ಷರು, ಶ್ರೀ ರಾಜು ಸಿ.ವಿ. ಸ್ಥಳಿಯ ಸಂಸ್ಥೆಯ ಉಪಾಧ್ಯಕ್ಷರು, ಶ್ರೀ ಯಶುರಾಜ ಬಿ.ಎಸ್.ಆರ್.ಎನ್.ಎಸ್ ಶಾಲೆ ಪ್ರಾಂಶುಪಾಲರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳನ್ನು ಉದ್ದೇಶಿ ಮಾತನಾಡಿದರು.



* ಬೆಂಗಳೂರು ದಕ್ಷಿಣ ಜಿಲ್ಲೆಯ ಕೆ.ಆರ್.ಪುರಂ ಸ್ಥಳಿಯ ಸಂಸ್ಥೆಯ ವತಿಯಿಂದ ಜನವರಿ 28 ರಿಂದ 03ರ ವರೆಗೆ ಮೂಲ ತರಬೇತಿ ಶಿಬಿರವನ್ನು ಡಾ ಅನಿಬೆಸೆಂಟ್ ಪಾರ್ಕ್ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಯೋಜನೆ ಮಾಡಲಾಯಿತು. ಕಬ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಕೃಷ್ಣಮೂರ್ತಿ ಎನ್.ಎ.ಎಲ್.ಟಿ(ಕಬ್) ನಾಯಕರಾಗಿದ್ದರು, ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಕೆ.ವಿ. ಶಾಮಲ ಎಲ್.ಟಿ(ಗೈಡ್) ನಾಯಕಿಯಾಗಿದ್ದರು, ಸ್ಕೌಟ್ಸ್ ವಿಭಾಗಕ್ಕೆ ಶ್ರೀ ಟಿ.ಕೆ. ನಾರಾಯಣಸ್ವಾಮಿ ಎಲ್.ಟಿ.(ಸ್ಕೌಟ್ಸ್) ನಾಯಕರಾಗಿದ್ದರು. ಶ್ರೀಮತಿ ಜಯಲಕ್ಷ್ಮಿ ಆರ್. ಗೈಡ್ಸ್ ವಿಭಾಗಕ್ಕೆ ನಾಯಕಿಯಾಗಿದರು ಒಟ್ಟು 69 ಶಿಬಿರಾರ್ಥಿಗಳು ಭಾಗವಹಿಸಿದರು. ಮೂಲ ತರಬೇತಿ ಶಿಬಿರಕ್ಕೆ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಜಿಲ್ಲಾ ಸಂಸ್ಥೆಯ ಪಧಾದಿಕಾರಿಗಳು ಬೇಟಿ ನೀಡಿದರು.



* ಫೆಬ್ರವರಿ 02 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ವ್ಯಾಪ್ತಿಯ ಶ್ರದ್ಧಾ ಶಾಂತಿನಿಕೇತನ ಶಾಲೆ ಗಿರಿನಗರದಲ್ಲಿ, ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಹೊಸದಾಗಿ ಬನ್ನೀಸ್, ಕಬ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್ ಘಟಕಗಳನ್ನು ಮತ್ತು ಇಕೋ ಕ್ಲಬ್ ಉದ್ಘಾಟನಾ ಮಾಡಿ ಸ್ಕೌಟ್ಸ್–ಗೈಡ್ಸ್‌ಗಳಿಗೆ ಪರಿಸರದ ಮಹತ್ವದ ಬಗ್ಗೆ ಸಂವಾದ ನಡೆಸಿದರು. ಕಾರ್ಯಕ್ರಮದಲ್ಲಿ ಶ್ರೀ ಗಂಗಪ್ಪ ಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಪಳನಿ ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಶ್ರೀ ಅಕ್ಷಯ ಹೆಬ್ಬೀಕರ್‌ರ ಶಾಲೆಯ ಪ್ರಾಂಶುಪಾಲರು, ಆಡಳಿತ ವರ್ಗದವರು ಉಪಸ್ಥಿತರಿದರು.



* ಫೆಬ್ರವರಿ 05 ರಂದು ವಿಲ್ಸನ್ ಗಾರ್ಡನ್ ಸ್ಥಳಿಯ ಸಂಸ್ಥೆಯ ವತಿಯಿಂದ ವಾರ್ಷಿಕ ರ್‍ಯಾಲಿಯನ್ನು ಸೆಂಟ್ ಪ್ರಾನ್ಸಿಸ್ ಪ್ರೌಢಶಾಲೆ ಕೋರಮಂಗಲದಲ್ಲಿ ಆಯೋಜನೆ ಮಾಡಲಾಯಿತು. ರ್‍ಯಾಲಿಗೆ ಮುಖ್ಯ ಅತಿಥಿಗಳಾಗಿ ಶ್ರೀ ರಾಮಲಿಂಗಾರೆಡ್ಡಿ ಎಂ.ಎಲ್.ಎ., ಬಿ.ಟಿ.ಎಂ. ಲೇಔಟ್ ವಿಧಾನಸಭಾ ಕ್ಷೇತ್ರ, ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಚಂದ್ರಪ್ಪ ಬಿ.ಬಿ.ಎಂ.ಪಿ. ಕಾರ್ಪೊರೇಟರ್, ಶ್ರೀ ಎಂ.ಕೆ. ಖಾನ್ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಟಿ.ಕೆ. ನಾರಾಯಣ ಸ್ವಾಮಿ ಜಿಲ್ಲಾ ತರಬೇತಿ ಆಯುಕ್ತರು, ಶ್ರೀ ಬಿ.ಎಸ್. ಅನಂತ್ ಜಿಲ್ಲಾ ಸಹಾಯಕ ಕಾರ್ಯದರ್ಶಿಗಳು, ಶ್ರೀ ಜನಾರ್ಧನ್ ಚಕ್ರವರ್ತಿ, ಜಿಲ್ಲಾ ಸ್ಥಾನಿಕ ಆಯುಕ್ತರು, ಶ್ರೀ ಶಾಂತ ವೇಣುಗೋಪಾಲ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಶ್ರೀ ಬಸವರಾಜು ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರು, ಸ್ಥಳಿಯ ಸಂಸ್ಥೆಯ ಪಧಾಧಿಕಾರಿಗಳು ಉಪಸ್ಥಿತರಿದರು. ರ್‍ಯಾಲಿಯಲ್ಲಿ 43 ಕಬ್ಸ್, 36 ಬುಲಬುಲ್ಸ್, 181 ಸ್ಕೌಟ್ಸ್, 174 ಗೈಡ್ಸ್, 10 ರೋವರ್ಸ್, 11 ರೇಂಜರ್ಸ್, 34 ದಳ ನಾಯಕರುಗಳು ಭಾಗವಹಿಸಿದರು.




* ಫೆಬ್ರವರಿ 11 ರಂದು ವೈಟ್ಸ್‌ಫೀಲ್ಡ್ ಸ್ಥಳೀಯ ಸಂಸ್ಥೆಯ ವತಿಯಿಂದ ಏರ್ ಫೋರ್ಸ್ ಎ.ವಿ. ಕ್ಯಾಂಪ್‌ನಲ್ಲಿ ರ್‍ಯಾಲಿಯನ್ನು ಆಯೋಜನೆ ಮಾಡಲಾಯಿತು. ಶ್ರೀ ಎಂ.ಕೆ. ಖಾನ್ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಜಿತೇಶ್ ಸೇಟ್ ಸ್ಥಳಿಯ ಸಂಸ್ಥೆಯ ಖಂಜಾಚಿಗಳು ಹಾಗೂ ರಾಷ್ಟ್ರೀಯ




ಆಯುಕ್ತರು (ರೋವರ್ಸ್) ಶ್ರೀ ಟಿ.ಕೆ. ನಾರಾಯಣಸ್ವಾಮಿ ಜಿಲ್ಲಾ ತರಬೇತಿ ಆಯುಕ್ತರು, ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿಗಳು, ಶ್ರೀ ಜನಾರ್ಧನ್ ಚಕ್ರವರ್ತಿ ಜಿಲ್ಲಾ ಸ್ಥಾನಿಕ ಆಯುಕ್ತರು, ಸ್ಥಳಿಯ ಸಂಸ್ಥೆಯ ಪಧಾಧಿಕಾರಿಗಳು ಉಪಸ್ಥಿತರಿದರು. ಕಬ್–67, ಬುಲ್‌ಬುಲ್–84, ಸ್ಕೌಟ್ಸ್–111, ಗೈಡ್ಸ್–118, 25 ದಳ ನಾಯಕ–ನಾಯಕಿಯರು ರ‍್ಯಾಲಿಯಲ್ಲಿ ಭಾಗವಹಿಸಿದರು.

* ಫೆಬ್ರವರಿ 12 ರಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ವತಿಯಿಂದ ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿಗಳು, ಸಹಾಯಕ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ತರಬೇತಿ ಸಲಹೆಗಾರರು, ಸ್ಕೌಟರ್ಸ್–ಗೈಡರ್ಸ್ ಪ್ರತಿನಿಧಿಗಳು, ಯುವ ಪ್ರತಿನಿಧಿಗಳಿಗೆ 2023–24ನೇ ಸಾಲಿನ ಕಾರ್ಯಕ್ರಮ ಮತ್ತು ಚಟುವಟಿಕೆಗಳ ಬಗ್ಗೆ ಕಾರ್ಯಾಗಾರವನ್ನು ಶಾಂತಿಗೃಹ ಆವರಣದಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಎ.ಎಸ್. ಮಧುಸೂದನ್, ಜಿಲ್ಲಾ ಖಜಾಂಚಿ ಮತ್ತು ಹೆಚ್ಚುವರಿ ಅಂತಾರಾಷ್ಟ್ರೀಯ ಆಯುಕ್ತರು, ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿಗಳು, ಶ್ರೀ ವಿಕ್ಟೋರಿಯಾ ಅಮಲರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿ, ಶ್ರೀ ಗಾಯತ್ರಿಗೌಡ, ಜಿಲ್ಲಾ ತರಬೇತಿ ಆಯುಕ್ತರು (ಗೈಡ್) ಶ್ರೀ ಜನಾರ್ಧನ್ ಚಕ್ರವರ್ತಿ, ಜಿಲ್ಲಾ ಸ್ಥಾನಿಕ ಆಯುಕ್ತರು, ಶ್ರೀ ಚಂದ್ರು ಪಿ. ಸಹಾಯಕ ರಾಜ್ಯ ಆಯುಕ್ತರು ಕಾರ್ಯಾಗಾರದಲ್ಲಿ ಉಪಸ್ಥಿತರಿದರು.



* ಜನವರಿ ಮತ್ತು ಫೆಬ್ರವರಿ ಮಾಹೆಯಲ್ಲಿ ರಾಜ್ಯ ಸಂಸ್ಥೆಯಿಂದ ನೀಡಲಾದ 2023ನೇ ಸಾಲಿನ ಸ್ಕೌಟ್–ಗೈಡ್ ಕ್ಯಾಲೆಂಡರ್‌ಗಳನ್ನು ಜಿಲ್ಲೆಯ ಉಪನಿರ್ದೇಶಕರಿಗೆ ಆಡಳಿತ ಮತ್ತು ಅಭಿವೃದಿ, ಉಪನಿರ್ದೇಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ದಕ್ಷಿಣ ಜಿಲ್ಲೆ, ಜಿಲ್ಲಾ ಪಂಚಾಯತ್ ಕಛೇರಿ, ಕ್ಷೇತ್ರ ಶಿಕ್ಷಣಾದಿಕಾರಿಗಳು, ಜಿಲ್ಲಾ / ಸ್ಥಳೀಯ ಸಂಸ್ಥೆಯಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳಿಗೆ, ಜಿಲ್ಲೆಯ ಶಾಲೆಯ ಮತ್ತು ಕಾಲೇಜುಗಳ ಪ್ರಾಂಶುಪಾಲರುಗಳಿಗೆ ನೀಡಲಾಯಿತು.

## ಬೆಂಗಳೂರು ಉತ್ತರ

The SHIVAJINAGAR LOCAL ASSOCIATION, Conducted Local Association Rally on 21st January 2023 at R.T.C. GIRLS HIGHER PRY SCHOOL, ST, JOSEPH'S CONVENT, Promenade RD. Sr. Sagaya Mary, HEAD MISTRESS, Smt. Revathy Balakrisnan, Smt. DEVI KALA ADC(G) OF APD LINGARAJ PURAM. & Dr. C V KRUPA VAJAI SECRETARY OF SLA were the gucsts THE PARTICIPANTS WERE from different schools, Different Activities were conducted. TOTAL CUBS, BULBULS, Scouts & Guides Participated were 267.



* ಜಿಲ್ಲಾ ಮಟ್ಟದ ಕಬ್, ಬುಲ್‌ಬುಲ್ ಉತ್ಸವ ಜನವರಿ 21 ಮತ್ತು 22 ರಂದು ಆರ್.ಟಿ. ನಗರ ಪಬ್ಲಿಕ್ ಸ್ಕೂಲ್ ಸಿಂಗನಾಯಕನಹಳ್ಳಿ ಯಲಹಂಕ ಇಲ್ಲಿ ನಡೆಯಿತು. ಶಿಬಿರದ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನಕುಮಾರ್ ಇವರು ನೆರವೇರಿಸಿ ಕಾರ್ಯಕ್ರಮಕ್ಕೆ ಶುಭ ಕೋರಿದರು. ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಮೋಹನ್ ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಜಿಲ್ಲಾ ಮಟ್ಟದ ಕಬ್–ಬುಲ್‌ಬುಲ್ ಉತ್ಸವ ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರು ಭೇಟಿ ನೀಡಿ ಕಬ್ ಬುಲ್‌ಬುಲ್ ಮಕ್ಕಳೊಂದಿಗೆ ಸಂವಾದ ಮಾಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸಿದರು. ವಿವಿಧ ಶಾಲೆಗಳಿಂದ 350 ಕಬ್ ಬುಲ್‌ಬುಲ್ ಶಿಕ್ಷಕರು ಭಾಗವಹಿಸಿದ್ದರು.



* ಮಾರ್ಚ್ 04 ರಂದು ಆರ್.ಟಿ. ನಗರ ಪಬ್ಲಿಕ್ ಸ್ಕೂಲ್ ಆರ್.ಟಿ. ನಗರ ಇಲ್ಲಿ ಆರ್.ಟಿ.ನಗರ ಸ್ಥಳೀಯ ಸಂಸ್ಥೆಯ ದ್ವಿತೀಯ ಸೋಪಾನ ದ್ವಿತೀಯ ಚರಣ್ ರಜತ್ ಗರಿ ಪರೀಕ್ಷಾ ಶಿಬಿರ ನಡೆಸಲಾಯಿತು.

ಕಾರ್ಯಕ್ರಮಕ್ಕೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನ ಕುಮಾರ್ ಚಾಲನೆ ನೀಡಿ ಶುಭಾಶಯ ಕೋರಿದರು. ಸಂಸ್ಥೆ ಕಾರ್ಯದರ್ಶಿ ಶ್ರೀ ಸುರೇಶ್ ಬಿರಾದರ್ ಪರೀಕ್ಷಾ ಶಿಬಿರವನ್ನು ಸಂಘಟಿಸಿದರು. ವಿವಿಧ ಶಾಲೆಗಳಿಂದ 160 ಸ್ಕೌಟ್ಸ್–ಗೈಡ್ಸ್ ಕಬ್–ಬುಲ್‌ಬುಲ್ ಭಾಗವಹಿಸಿದರು.

* ಫೆಬ್ರವರಿ 15 ರಂದು ಎಸ್. ಕಡಂಬಿ ವಿದ್ಯಾ ಕೇಂದ್ರ ಸ್ಕೌಟ್ಸ್–ಗೈಡ್ಸ್‌ಗಳಿಂದ ಸಮುದಾಯ ಸೇವೆಯನ್ನು ಶ್ರೀ ಬಲಮುರಿ ವಿಘ್ನೇಶ್ವರ ಮತ್ತು ಬಾಲಾಂಜನೇಯ ದೇವಸ್ಥಾನ ರಾಜಾಜಿನಗರ ಇಲ್ಲಿ ನಡೆಸಲಾಯಿತು. ಸ್ಕೌಟ್ಸ್–ಗೈಡ್ಸ್ ಶಿಕ್ಷಕರು ಕಾರ್ಯಕ್ರಮ ಸಂಘಟಿಸಿದರು.

* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್–ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಕಾರ್ಯಕ್ರಮದಡಿಯಲ್ಲಿ ಜನವರಿ 26ರಂದು ಗಂಟಿಗಾನಹಳ್ಳಿಯಲ್ಲಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛ ಮಾಡಲಾಯಿತು ಹಾಗೂ ಪಿ.ಡಿ.ಓ.ರವರು ತಮ್ಮ ಸಹಕಾರ ನೀಡಿದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ಕಾಲೇಜುಗಳಿಂದ 60 ಮಂದಿ ಭಾಗವಹಿಸಿದ್ದರು.



## ಚಿತ್ರದುರ್ಗ

ಡಿ.ವಿ.ಎಸ್. ಆಂಗ್ಲ ಮಾಧ್ಯಮ ಶಾಲೆ ಮತ್ತು ಪಿ.ಯು. ಕಾಲೇಜು, ಭರಮಸಾಗರ ಜಿಲ್ಲಾ ಸಂಸ್ಥೆ, ಚಿತ್ರದುರ್ಗ ಇವರ ಸಂಯುಕ್ತಾಶ್ರಯದಲ್ಲಿ ಡಿ.ವಿ.ಎಸ್. ಕಬ್ ಪ್ಯಾಕ್ ಮಕ್ಕಳಿಗೆ ಸೈಕಲ್ ಜಾಥಾ ಕಾರ್ಯಕ್ರಮವನ್ನು ಫೆಬ್ರವರಿ 05ರ ಭಾನುವಾರದಂದು ಹಮ್ಮಿಕೊಳ್ಳಲಾಗಿತ್ತು. ಈ ಸೈಕಲ್ ಜಾಥಾ ಕಾರ್ಯಕ್ರಮವನ್ನು ಬೆಳಿಗ್ಗೆ 8.30ಕ್ಕೆ ಶಾಲಾ ಆವರಣದಿಂದ ಪ್ರಾರಂಭಿಸಿ ಬಿಳಿಚೋಡು ರಸ್ತೆ, ಗಣೇಶನ ದೇವಸ್ಥಾನದ ರಸ್ತೆ, ಬಸ್ ಸ್ಟಾಂಡ್ ರಸ್ತೆಯ ಮಾರ್ಗವಾಗಿ ಆಂಜನೇಯ ದೇವಸ್ಥಾನದವರೆಗೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಕಬ್ ಮಾಸ್ಟರ್ ಶ್ರೀ ಸುಭಾಷ್ ನಿರ್ವಹಿಸಿದರು. ಈ ಕಾರ್ಯಕ್ರಮಕ್ಕೆ ಡಿ.ವಿ.ಎಸ್. ಸಂಸ್ಥೆಯ ಆಡಳಿತ ಮಂಡಳಿ ಮತ್ತು ಮುಖ್ಯೋಪಾಧ್ಯಾಯರು, ಜಿಲ್ಲಾ ಸಂಘಟಕರಾದ ಪಾಟೀಲ್ ಜಿ.ಬಿ.ಸಿ. ಮತ್ತು ಶಿಕ್ಷಕ ವರ್ಗದವರು ಸಹಕರಿಸಿದರು.

* "ಶಿಸ್ತು, ಸಂಯಮ, ಸೇವೆ, ಪರಿಸರ ಕಾಳಜಿ ಹಾಗೂ ವೈವಿಧ್ಯತೆಯಲ್ಲಿ ಏಕತೆ ಗುಣವನ್ನು ಮಕ್ಕಳಲ್ಲಿ ಮೂಡಿಸುವಂತಹ ಕಾರ್ಯಕ್ರಮವನ್ನು ವಾಗ್ದೇವಿ ಶಿಕ್ಷಣ ಸಂಸ್ಥೆ ಮಾಡಿರುವುದು ನಿಜಕ್ಕೂ ಸಂತೋಷದ ಸಂಗತಿ"ಎಂದು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ತಿಳಿಸಿದರು. ಹೊಳಲ್ಕೆರೆ ತಾಲ್ಲೂಕಿನ ವಾಗ್ದೇವಿ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಫೆಬ್ರವರಿ 05 ರಿಂದ 06ರ ವರೆಗೆ ತಾಲ್ಲೂಕು ಮಟ್ಟದ ಸಮ್ಮಿಲನ ರ‍್ಯಾಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು




ಮಾತನಾಡಿದರು. ಶಾಲಾ ವ್ಯವಸ್ಥಾಪಕರಾದ ಶ್ರೀ ಸಿದ್ದಲಿಂಗಸ್ವಾಮಿ ಮಾತನಾಡಿ, "ಮೂಡಬಿದಿರೆಯಲ್ಲಿ ನಡೆದ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಸ್ಕೌಟ್ ಮತ್ತು ಗೈಡ್ ಜಾಂಬೂರಿ ಇತಿಹಾಸದ ಮೈಲಿಗಲ್ಲನ್ನು ಸೃಷ್ಟಿಸಿದೆ. ಇಂತಹ ಜಾಂಬೂರಿಗಳು ಶಾಲಾ ಮಕ್ಕಳಿಗೆ ಸ್ಫೂರ್ತಿದಾಯಕವಾಗಲು ತಾಲ್ಲೂಕು ಮಟ್ಟದ ಮಿನಿ ಸ್ಕೌಟ್ ಮತ್ತು ಗೈಡ್ ಜಾಂಬೂರಿಯನ್ನು ಸಣ್ಣ ಮಟ್ಟದಲ್ಲಿ ನಾವು ಕೂಡ ಆಯೋಜನೆ ಮಾಡಿದ್ದೇವೆ" ಎಂದು ಹರ್ಷ



## ಅಭಿನಂದನೆಗಳು



ಕರ್ನಾಟಕ ರಾಜ್ಯ ಜ್ಞಾನ ವಿಜ್ಞಾನ ಸಮಿತಿಯ ವಿಜಯಪುರ ಜಿಲ್ಲಾ ಘಟಕದ ವತಿಯಿಂದ ಸಾವಿತ್ರಿಬಾಯಿ ಪುಲೆ ಜನ್ಮದಿನದ ಪ್ರಯುಕ್ತ ನೀಡುವ 2022–23ನೇ ಸಾಲಿನ ಉತ್ತಮ ಶಿಕ್ಷಕ ಪ್ರಶಸ್ತಿಗೆ ಉಳ್ಳಾಲದ ಸೈಯದ್ ಮದನಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ಕೆ.ಎಂ.ಕೆ. ಮಂಜನಾಡಿ ಆಯ್ಕೆಯಾಗಿರುತ್ತಾರೆ. ಫೆ.12 ರಂದು ವಿಜಯಪುರದ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನ ಎಂ. ವಿಶ್ವೇಶ್ವರಯ್ಯ ಸಭಾ ಭವನದಲ್ಲಿ ನಡೆದ ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಿರುತ್ತಾರೆ. ಕ್ರಿಯಾಶೀಲ ಶಿಕ್ಷಕರಾದ ಶ್ರೀ ಕೆ.ಎಂ.ಕೆ. ಮಂಜನಾಡಿ ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವವರೊಂದಿಗೆ ಹಲವಾರು ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವರು. ಇವರು ಉಳ್ಳಾಲ ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿಗಳೂ ಆಗಿರುತ್ತಾರೆ.

ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಎ. ಲಿಂಗಾರೆಡ್ಡಿ, ಶಾಲೆಯ ಆಡಳಿತಾಧಿಕಾರಿ ಶ್ರೀ ಶಿವರಾಮ್, ಶಾಲೆಯ ನಿರ್ದೇಶಕರಾದ ಶ್ರೀ ಶ್ರೀನಿವಾಸ್, ಸೇರಿದಂತೆ ಶಾಲೆಯ ಮಕ್ಕಳು ಹಾಗೂ ತಾಲ್ಲೂಕಿನ ದಳ ನಾಯಕ/ ನಾಯಕಿಯರು ವಿವಿಧ ಶಾಲೆಯ 1000ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದರು.

* "ಸ್ಕೌಟ್ ಮತ್ತು ಗೈಡ್ಸ್‌ನ ಕಾರ್ಯಕ್ರಮಗಳು ಮಾನವೀಯ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡುತ್ತಿವೆ. ಅಂತಹ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದು ಮೂಡಬಿದ್ರೆಯಲ್ಲಿ ನಡೆದ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಸ್ಕೌಟ್-ಗೈಡ್ ಜಾಂಬೂರಿಯಾಗಿದೆ ಎಂದು ಶ್ರೀ ಪಿ.ಜಿ.ಆರ್. ಸಿಂಧ್ಯಾ ರಾಜ್ಯ ಮುಖ್ಯ ಆಯುಕ್ತರು ಹೇಳಿದರು. ಜಿಲ್ಲಾ ಸಂಸ್ಥೆ ಚಿತ್ರದುರ್ಗ ಸ್ಥಳೀಯ ಸಂಸ್ಥೆ ಹೊಸದುರ್ಗ ವತಿಯಿಂದ ಫೆಬ್ರವರಿ 04 ರಂದು ನಗರದ ಸಂತ ಆಂಥೋನಿ ಶಾಲೆಯಲ್ಲಿ ನಡೆದ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಲ್. ಜಯಪ್ಪ ಮಾತನಾಡಿ, "ಮಕ್ಕಳಿಗೆ ವ್ಯಕ್ತಿತ್ವ ವಿಕಸನ ಜೊತೆಗೆ ಸರ್ವಾಂಗೀಣ ಅಭಿವೃದ್ಧಿಗೆ ಸ್ಕೌಟ್ ಮತ್ತು ಗೈಡ್ಸ್ ಸಹಕಾರಿಯಾಗಿದೆ" ಎಂದು ನುಡಿದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಬಿ.ಎ. ಲಿಂಗಾರೆಡ್ಡಿ ಮಾತನಾಡಿ, "ಸ್ಕೌಟ್ ಮತ್ತು ಗೈಡ್ಸ್ ಸೇವಾ ಸಂಸ್ಥೆಯಾಗಿದ್ದು ಒಳ್ಳೆಯ ಸೇವೆಗಳನ್ನು ಮಾಡುತ್ತ ಸೇವೆ ಮಾಡಿದವರನ್ನು ಮುಖ್ಯ ವಾಹಿನಿಗೆ ತರುವಂತಹ ಕೆಲಸವನ್ನು ಸ್ಕೌಟ್ ಮತ್ತು ಗೈಡ್ಸ್ ಮಾಡುತ್ತಿದೆ" ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಉಜಿನಪ್ಪ, ಸ್ಥಳೀಯ ಅಧ್ಯಕ್ಷರಾದ ಶ್ರೀ ಲವಕುಮಾರ್, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳಾದ ಶ್ರೀ ಓಂಕಾರಪ್ಪ, ಶ್ರೀ ಈಶ್ವರಪ್ಪ ಹಾಗೂ ಮಾಜಿ ಸೈನಿಕರುಗಳು, ಪೋಷಕರು, ದಾನಿಗಳು, ದಳನಾಯಕ/ ನಾಯಕಿಯರು, ಮಕ್ಕಳು ಭಾಗವಹಿಸಿದ್ದರು.




* "ಗಣರಾಜ್ಯೋತ್ಸವ ದಿನಾಚರಣೆಯನ್ನು ಪ್ರತಿ ವರ್ಷವು ಸಹ ಅರ್ಥಬದ್ಧವಾಗಿ ಆಚರಿಸುವುದು ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಕೆಲಸವಾಗಿದೆ" ಎಂದು ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಉಜಿನಪ್ಪ ತಿಳಿಸಿದರು. ಜಿಲ್ಲಾ ಸಂಸ್ಥೆಯಲ್ಲಿ ನಡೆದ 74ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಜಿಲ್ಲಾ ಸಹ ಕಾರ್ಯದರ್ಶಿ ಡಾ|| ರಹಮತ್ ಉಲ್ಲಾ ಮಾತನಾಡಿ, "ಗಣರಾಜ್ಯೋತ್ಸವ ದಿನಾಚರಣೆಯಂದು ನಮ್ಮ ರಾಷ್ಟ್ರ ರಕ್ಷಣೆಗೆ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ಮಹಾನ್ ವೀರರನ್ನು ಸ್ಮರಿಸುವ ದಿನವಾಗಿದೆ" ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು ರೆಡ್ ಕ್ರಾಸ್ ಛೇರ್ಮನ್ ಶ್ರೀ ವೈ.ಬಿ. ಮಹೇಂದ್ರನಾಥ ಮತ್ತಿತರರಿದ್ದರು.

## ಚಿಕ್ಕಮಗಳೂರು

ಭೂ ಸೇವೆಯಲ್ಲಿ ಸುದೀರ್ಘ 30 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾದ ತಾಲ್ಲೂಕಿನ ಸುಬೇದಾರ್ ಮೇಜರ್ ಸಂಗಮ್‌ರವರನ್ನು ಜಿಲ್ಲಾ ಸಂಸ್ಥೆಯ ವತಿಯಿಂದ ಗೌರವಿಸಲಾಯಿತು. ಜನವರಿ 07 ರಂದು ಐ.ಡಿ.ಎಎಸ್. ಪ್ರಥಮ ದರ್ಜೆ ಕಾಲೇಜಿನಲ್ಲಿ ಒಂದು ದಿನದ ಮೂಲ ತರಬೇತಿ ಶಿಬಿರವನ್ನು ಹಾಗೂ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದಲ್ಲಿ ಜಿಲ್ಲೆಯ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ಮತ್ತು ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಸಿ. ಸಂಧ್ಯಾರಾಣಿ ಜಿಲ್ಲಾ ಸಂಘಟನ ಆಯುಕ್ತರಾದ ಶ್ರೀ ಬಿ.ಎನ್. ಕಿರಣ್‌ಕುಮಾರ್ ಭಾಗವಹಿಸಿದ್ದರು.



* ಜನವರಿ 12 ರಂದು ಜಿಲ್ಲಾ ಸಂಸ್ಥೆ ಮತ್ತು ಜಿಲ್ಲಾಡಳಿತದ ವತಿಯಿಂದ ಸ್ವಾಮಿ ವಿವೇಕಾನಂದರವರ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಂತಿಯ ಕಡೆಗೆ ನಮ್ಮ ನಡೆ ಕಾರ್ಯಕ್ರಮದಲ್ಲಿ ತಾಲ್ಲೂಕಿನ 70 ರೋವರ್ಸ್, 25 ರೇಂಜರ್ಸ್ ಭಾಗವಹಿಸಿದ್ದರು. ನಗರದ ಮಾಡೆಲ್ ಶಾಲೆ ಮತ್ತು ಬಿ.ಜಿ.ಎಸ್. ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸಲಾಯಿತು.



* ಜನವರಿ 18. ರಿಂದ 23ರ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಚಿಕ್ಕಮಗಳೂರು ಹಬ್ಬವನ್ನು "ಒಲವಿನ ನೆಲದಲ್ಲಿ ಕಲೆಗಳ ಕಲರವ" ಎಂಬ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ತಾಲ್ಲೂಕಿನ ಶಾಲಾ ಕಾಲೇಜು ಸ್ಕೌಟ್ಸ್-ಗೈಡ್ಸ್ ರೋವರ್ಸ್ ಮತ್ತು ರೇಂಜರ್ಸ್‌ಗಳು ಸೇರಿ ಒಟ್ಟು 180 ವಿದ್ಯಾರ್ಥಿಗಳು ಸೇವೆ ಸಲ್ಲಿಸಿರುತ್ತಾರೆ. ಇವರನ್ನು ಜಿಲ್ಲಾಧಿಕಾರಿಗಳಾದ ಶ್ರೀ ಕೆ.ಎನ್. ರಮೇಶ್‌ರವರು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಜಿ. ಪ್ರಭುರವರು ಅಭಿನಂದಿಸಿದ್ದಾರೆ.

* ಜನವರಿ 26 ರಂದು ನಗರದ ಸುಭಾಷ್ ಚಂದ್ರ ಬೋಸ್ ಆಟದ ಮೈದಾನದಲ್ಲಿ 74ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ 3 ಸ್ಕೌಟ್ಸ್, 1 ಗೈಡ್ಸ್ ತಂಡಗಳು ಭಾಗವಹಿಸಿದ್ದವು. ವಾಸವಿ ಶಾಲೆಯ ಸ್ಕೌಟ್ ತಂಡ ಪಥಸಂಚಲನದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತದೆ. ನಂತರ ಜಿಲ್ಲಾ ಸಂಸ್ಥೆಯಲ್ಲಿ ಆಯೋಜಿಸಿದ್ದ 74ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮೇಜರ್ ಸಂಗಮ್‌ರವರು ಧ್ವಜಾರೋಹಣ ನೆರವೇರಿಸಿರುತ್ತಾರೆ.

## ದಕ್ಷಿಣ ಕನ್ನಡ

ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಗುರುಪುರ ವಲಯ ಆರ್ಥಿಕ ಹಾಗೂ ಹೊರಕಾಣಿಕೆಯ ಸಮಿತಿಯ ಕೃತಜ್ಞತಾ, ಅಭಿನಂದನಾ ಸಭೆಯು ಜನವರಿ 20 ರಂದು ರೋಸಾಮಿಸ್ತಿಕಾ ಪ್ರೌಢಶಾಲಾ ಸಭಾಂಗಣದಲ್ಲಿ ನಡೆಯಿತು. ಸಭೆಯಲ್ಲಿ ಉಪಸ್ಥಿತರಿದ್ದ ಗಣ್ಯರನ್ನು ಗುರುಪುರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಸುಷ್ಮಾ ಪಿಂಟೋ ಸ್ವಾಗತಿಸಿದರು. ಅಂತಾರಾಷ್ಟ್ರೀಯ ಸಾಂಸ್ಕ ೃತಿಕ ಜಾಂಬೂರಿಗೆ ಸಹಕರಿಸಿದ ದಿ. ನೌಶಾದ್ ಹಾಜಿ ಸೂರಲ್ಪಾಡಿ ಅವರಿಗೆ ಒಂದು ನಿಮಿಷ ಮೌನ ಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಆರ್ಥಿಕ ಹಾಗೂ ಹೊರೆಕಾಣಿಕೆ ಸಮಿತಿಯ ಸಂಕ್ಷಿಪ್ತ ವರದಿಯನ್ನು ಶ್ರೀ ಸುನೀಲ್ ಕುಮಾರ್ ಶೆಟ್ಟಿ ನೀಡಿದರು. ರಾಜ್ಯ ಸಂಸ್ಥೆಯಿಂದ ನೀಡಲ್ಪಟ್ಟ 2023ನೇ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಿ ಪದಾಧಿಕಾರಿಗಳಿಗೆ ಹಂಚಲಾಯಿತು. ಸಭೆಯ ಅಧ್ಯಕ್ಷತೆಯನ್ನು ಗುರುಪುರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸೋಹನ್ ಅಧಿಕಾರಿ ವಹಿಸಿದರು. ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಹೊರೆಕಾಣಿಕೆಯ ಅಧ್ಯಕ್ಷರಾದ ಶ್ರೀ ಚಂದ್ರಹಾಸ ಶೆಟ್ಟಿ ನಾರಾಳ ತಮ್ಮ ಅನಿಸಿಕೆಯನ್ನು ಹೇಳಿದರು. ಎಡಪದವು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ಸುಕುಮಾರ, ಗಂಜಿಮಠ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ನೋಣಯ್ಯ, ಮುಚ್ಚೂರು ಗ್ರಾಮ ಪಂಚಾಯತ್ ಸದಸ್ಯ ಶ್ರೀ ಪ್ರವೀಣ್ ಆಳ್ವ ತಮ್ಮ ಅನಿಸಿಕೆಯನ್ನು ಹೇಳಿದರು. ಶ್ರೀ ಸೋಹನ್ ಅಧಿಕಾರಿ ಅಂತರಾಷ್ಟ್ರೀಯ ಸಾಂಸ್ಕ ೃತಿಕ ಜಾಂಬೂರಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು. ಅಂತರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಆರ್ಥಿಕ ಹಾಗೂ ಹೊರೆ ಕಾಣಿಕೆಯ ಅಧ್ಯಕ್ಷರಾದ ಶ್ರೀ ಚಂದ್ರಹಾಸ ಶೆಟ್ಟಿ ನಾರಳ ಇವರಿಗೆ ಅಭಿನಂದನಾ ಪತ್ರ ಹಾಗೂ ಫಲಕವನ್ನು ನೀಡಿ ಗೌರವಿಸಲಾಯಿತು. ಗುರುಪುರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸೋಹನ್ ಅಧಿಕಾರಿ ಅವರಿಗೂ ಅಭಿನಂದನಾ ಪತ್ರ ಹಾಗೂ ಫಲಕವನ್ನು ನೀಡಿ ಗೌರವಿಸಲಾಯಿತು. ಜಾಂಬೂರಿಯಲ್ಲಿ




ಕಂಟಿಜೆಂಟ್ ಲೀಡರ್ ಆಗಿ ಸೇವೆ ಸಲ್ಲಿಸಿದ ಶ್ರೀಮತಿ ಚೈತ್ರ, ಶುಭೋದಯ ಆಂಗ್ಲ ಮಾಧ್ಯಮ ಶಾಲೆ (ಸಿಬಿಎಸ್‌ಇ) ಅವರಿಗೆ ಜಾಂಬೂರಿ ಪದಕವನ್ನು ನೀಡಿ ಗೌರವಿಸಲಾಯಿತು.

* ಜನವರಿ 20 ರಂದು ಮಂಗಳೂರಿನ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನದಲ್ಲಿ, ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವರವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳ ಸಭೆ ನಡೆಯಿತು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯಿಂದ ನೀಡಲ್ಪಟ್ಟ 2023ನೇ ಸಾಲಿನ ಕ್ಯಾಲೆಂಡರ್‌ನ್ನು ಬಿಡುಗಡೆ ಮಾಡಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳಿಗೆ ಮತ್ತು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಿಗೆ ಹಸ್ತಾಂತರ ಮಾಡಲಾಯಿತು.



* ರಾಜ್ಯ ಸಂಸ್ಥೆಯಿಂದ ನೀಡಲ್ಪಟ್ಟ 2023ನೇ ಸಾಲಿನ ಕ್ಯಾಲೆಂಡರ್‌ನ್ನು ಜನವರಿ 18 ಮತ್ತು 19ರಂದು ಜಿಲ್ಲಾ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳಾದ ಡಾ. ಕುಮಾರ್, ಐ.ಎ.ಎಸ್., ಜಿಲ್ಲಾ ಪೊಲೀಸ್ ಆಯುಕ್ತರಾದ ಶ್ರೀ ಎನ್. ಶಶಿಕುಮಾರ್, ಐ.ಪಿ.ಎಸ್., ಶ್ರೀ ಅಂಶು ಕುಮಾರ್, ಐ.ಪಿ.ಎಸ್., ಪೊಲೀಸ್ ಉಪ ಆಯುಕ್ತರು (ಕಾನೂನು ಮತ್ತು ಸುವ್ಯವಸ್ಥೆ), ಶ್ರೀ ದಿನೇಶ್ ಕುಮಾರ್, ಐ.ಪಿ.ಎಸ್., ಪೊಲೀಸ್ ಉಪ ಆಯುಕ್ತರು (ಅಪರಾಧ ಮತ್ತು ಸಂಚಾರ), ಶ್ರೀ ಪಿ. ಉಮೇಶ್, ಐ.ಪಿ.ಎಸ್. ಪೊಲೀಸ್ ಉಪ ಆಯುಕ್ತರು (ನಗರ ಸಶಸ್ತ್ರ ಮೀಸಲು ಪಡೆ), ಶ್ರೀ ರವೀಶ್ ನಾಯಕ್, ಎ.ಸಿ.ಪಿ., ಸಿ.ಸಿ.ಆರ್.ಬಿ ಜಿಲ್ಲಾ ವಿಭಾಗೀಯ ನಿಯಂತ್ರಣ ಅಧಿಕಾರಿಗಳು ಶ್ರೀ ರಾಜೇಶ್ ಶೆಟ್ಟಿ ಎಲ್.ಎಲ್.ಬಿ., ಜಿಲ್ಲಾ ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಜಿಲ್ಲಾ ವಿಶೇಷಾಧಿಕಾರಿಗಳು ಕಾಲೇಜು ಶಿಕ್ಷಣ ಇಲಾಖೆ, ಜಿಲ್ಲಾ ಶಿಕ್ಷಣಾಧಿಕಾರಿಗಳು ಶ್ರೀ ವೆಂಕಟೇಶ್, ಜಿಲ್ಲಾ ಉಪಯೋಜನ ಸಮನ್ವಯಾಧಿಕಾರಿ ಶ್ರೀಮತಿ ಮಂಜುಳಾ ಕೆ.ಎಲ್. ಇವರಿಗೆ ಜಿಲ್ಲಾ ಸಂಸ್ಥೆಯ ಪರವಾಗಿ ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್ ರಾಜ್ ಕೆ. ರವರು ಹಸ್ತಾಂತರ ಮಾಡಿದರು.

* ಫೆಬ್ರವರಿ 3 ರಿಂದ 5ರ ವರೆಗೆ 25ನೇ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನವು ಬೆಳ್ತಂಗಡಿ ತಾಲ್ಲೂಕಿನ ಉಜಿರೆಯಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪದವಿ ಕಾಲೇಜಿನ 10 ರೋವರ್ಸ್ ಹಾಗೂ 10 ರೇಂಜರ್ಸ್ ಮತ್ತು ಎಸ್.ಡಿ.ಎಂ. ಪದವಿಪೂರ್ವ ಕಾಲೇಜಿನ 15 ರೋವರ್ಸ್ ಹಾಗೂ 17 ರೇಂಜರ್ಸ್

ಸಕ್ರಿಯವಾಗಿ ಸೇವೆ ಸಲ್ಲಿಸಿದರು. ಎಸ್.ಡಿ.ಎಂ. ಪದವಿ ಕಾಲೇಜಿನ ಆರ್.ಎಸ್.ಎಲ್. ಶ್ರೀ ಪ್ರಸಾದ್‌ಕುಮಾರ್ ಹಾಗೂ ಶ್ರೀಮತಿ ಆರ್.ಎಲ್. ಗಾನವಿ ಮತ್ತು ಎಸ್.ಡಿ.ಎಂ. ಪದವಿ ಪೂರ್ವ ಕಾಲೇಜಿನ ಆರ್.ಎಸ್.ಎಲ್. ಶ್ರೀ ಲಕ್ಷ್ಮೀಶ್ ಹಾಗೂ ಆರ್.ಎಲ್. ಅಂಕಿತರವರು ಮಾರ್ಗದರ್ಶನ ನೀಡಿರುತ್ತಾರೆ.

* ಮಂಗಳೂರಿನ ಅದ್ಯಪಾಡಿ ಬಿಬಿಲಚ್ಚಿಲ್ ಇಲ್ಲಿ ಫೆಬ್ರವರಿ 05 ರಂದು ನಡೆದ ಬ್ರಹ್ಮಕಲಶೋತ್ಸವ ಹಾಗೂ ನಾಗಬ್ರಹ್ಮಮಂಡಲ ಉತ್ಸವದಲ್ಲಿ ಸರ್ಕಾರಿ ಪ್ರೌಢಶಾಲೆ ಕಿನ್ನಿಕಂಬಳ ಇಲ್ಲಿಯ ಗೈಡ್ಸ್ ವಿದ್ಯಾರ್ಥಿನಿಯರು ತಮ್ಮ ಸೇವೆಯನ್ನು ಉತ್ತಮ ರೀತಿಯಲ್ಲಿ ನೀಡಿದರು. ಗೈಡರ್ ಶ್ರೀಮತಿ ಜಯಶ್ರೀ ನೇತೃತ್ವ ವಹಿಸಿದ್ದರು.

* ನಿತ್ಯಾಧರ್ ಆಂಗ್ಲ ಮಾಧ್ಯಮ ಶಾಲೆ, ನಿತ್ಯಾಧರ್ ನಗರ, ಪೆರ್ಮನ್ನೂರು, ನಿತ್ಯಾಧರ್ ಸ್ಕೌಟ್-ಗೈಡ್ ಗ್ರೂಪ್‌ನ ವತಿಯಿಂದ ಫೆಬ್ರವರಿ 6 ರಂದು ವಿವಿಧ ಸಾಧನೆಗೈದ ರಾಜ್ಯ ಪುರಸ್ಕೃತ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮದ ಅಧ್ಯಕ್ಷರಾಗಿ ಶಾಲಾ ಸಂಚಾಲಕರಾದ ವಂದನೀಯ ಗುರುಗಳಾದ ಅಂತೋನಿ ಲಸ್ರಾದೋ, ಶಾಲಾ ಮುಖ್ಯೋಪಾಧ್ಯಾಯಿನಿ ಭಗಿನಿ ಪ್ರಮೀಲಾ ರೋಡ್ರಿಗಸ್, ಮುಖ್ಯ ಅತಿಥಿ ಡಾ. ಮುರಳಿ ಮೋಹನ್ ಚುಂತಾರು, ಕಮಾಡೆಂಟ್, ಜಿಲ್ಲಾ ಗೃಹ ರಕ್ಷಕ ದಳ ದಕ್ಷಿಣ ಕನ್ನಡ ಜಿಲ್ಲೆ, ಶ್ರೀಯುತ ಅಬೂಬಕ್ಕರ್ ಸಿದ್ಧಿಕ್ ಶಿಕ್ಷಕ ರಕ್ಷಕ ಸಭೆಯ ಗೌರವ ಅಧ್ಯಕ್ಷರು ಹಾಗೂ ಸ್ಥಳೀಯ ಸಂಸ್ಥೆಯ ಎ.ಡಿ.ಸಿ. ಸ್ಕೌಟ್, ಶಿಕ್ಷಕ ರಕ್ಷಕ ಸಂಘದ ಕಾರ್ಯದರ್ಶಿ ಶ್ರೀಯುತ ವೆಂಕಟೇಶ್ ಇವರು ಉಪಸ್ಥಿತರಿದ್ದರು. 10 ಬನ್ನಿ ಮಕ್ಕಳಿಗೆ ಏಪ್ರನ್ ತೊಡಿಸುವ ಮೂಲಕ ಬನ್ನಿ ಘಟಕ ಉದ್ಘಾಟಿಸಿದರು. ನಂತರ 5 ಕಬ್ ಮರಿಗಳಿಗೆ ಸ್ಕಾರ್ಫ್ ನೀಡಿ ಕಬ್ ಪ್ಯಾಕ್‌ಗೆ ಸೇರಿಸಲಾಯಿತು. ಶಾಲಾ ಸಂಚಾಲಕರಿಗೆ, ಮುಖ್ಯೋಧ್ಯಾಯಿನಿಯರಿಗೆ, ಶ್ರೀಮತಿ ಜೆನಿಫರ್ ಲೋಬೊ, ಫ್ಲಾಕ್ ಲೀಡರ್, ಲೇಡಿ ಸ್ಕೌಟ್ ಮಾಸ್ಟರ್, ಶ್ರೀಮತಿ ರೀನಾ ವಿಲ್ಮಾಡಿ ಸೋಜ, ಗೈಡ್ ಕ್ಯಾಪ್ಟನ್, ಶ್ರೀಮತಿ ನಯನ ಕೆ, ಶ್ರೀಮತಿ ಸವಿತ ಸಿಕ್ವೆರಾ ಸಹಾಯಕಿ ಗೈಡ್ ಇವರನ್ನು ಪೋಷಕರು ಶಾಲು ಹೊದಿಸಿ ಸ್ಮರಣಿಕೆ ನೀಡಿ ಸನ್ಮಾನಿಸಿದರು. ಬನ್ನಿ ಅಂಟಿಗಳಾದ ಶ್ರೀಮತಿ ರಿಯಾನ ಅಮ್ಮನ್ನ, ಶ್ರೀಮತಿ ಬಬಿತ, ಶ್ರೀಮತಿ ಪ್ರೀತ ಡಿ'ಸೋಜ ಇವರಿಗೆ ಸ್ಮರಿಣಿಕೆ ನೀಡಿ ಗೌರವಿಸಿದರು.



## ದಾವಣಗೆರೆ

ಜನವರಿ 12 ರಂದು ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆ ಮತ್ತು ದೇಶಭಕ್ತಿ ಗೀತೆಗಳ ಗೀತಗಾಯನ ಸ್ಪರ್ಧೆ ಮತ್ತು ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ ಧ.ರಾ.ಮ ಸ್ಕೌಟ್ ಭವನದಲ್ಲಿ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ ಜಿಲ್ಲಾ ಸ್ಕೌಟ್ ಆಯುಕ್ತರು, ಉಪಾಧ್ಯಕ್ಷರುಗಳಾದ ಶ್ರೀಮತಿ ಶಾಂತಾ ಎಸ್. ಯಾವಗಲ್, ಶ್ರೀಮತಿ ಮಂಗಳ ವಿಶ್ವನಾಥ್, ಶ್ರೀ ಬೂಸ್ನೂರು ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಪದಾಧಿಕಾರಿಗಳು, ಯುವ ಸಮಿತಿ ಸದಸ್ಯರುಗಳು ಹಾಗೂ ಪೋಷಕರು ಉಪಸ್ಥಿತರಿದ್ದರು. 100 ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಕಾರ್ಯಕ್ರಮವನ್ನು ಸಂಘಟಿಸಿದರು.



* ಜನವರಿ 24 ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ವಿಕಲ ಚೇತನ ಮಕ್ಕಳಿಗೆ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ಸೆಂಟ್ ಪಾಲ್ಸ್ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲೆಯ ಗೈಡ್ಸ್ ಮಕ್ಕಳು ಸೇವೆ ಸಲ್ಲಿಸಿದರು.



* ಜನವರಿ 24 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಜಿಲ್ಲಾ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ಸ್‌ಗಳ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಶ್ರೀ ಮುಸ್ತಫ ಯುವ ಸಮಿತಿ ಅಧ್ಯಕ್ಷರು ಉಪಸ್ಥಿತರಿದ್ದರು.

* ಜನವರಿ 24 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಮತ್ತು ಸುಭಾಷ್‌ಚಂದ್ರ ಬೋಸ್ ಹುಟ್ಟುಹಬ್ಬವನ್ನು ಸೆಂಟ್ ಪಾಲ್ಸ್ ಶಾಲೆಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಮಂಜುಳ, ಶಿಕ್ಷಕಿಯರಾದ ಶ್ರೀಮತಿ ಫಿಲೋಮಿನ, ಗೈಡ್ ಕ್ಯಾಪ್ಟನ್ ನಯನ ಏಸು ಪ್ರಿಯ, ಸ್ಕೌಟ್ ಮಾಸ್ಟರ್ ರವೀಂದ್ರ ಸ್ವಾಮಿ ಉಪಸ್ಥಿತರಿದ್ದರು.



* ಜನವರಿ 25 ರಂದು ತುಂಗಭದ್ರ ಸಭಾಂಗಣ, ಜಿಲ್ಲಾಧಿಕಾರಿಗಳ ಕಛೇರಿ ಇಲ್ಲಿ ನಡೆದ 13ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲೆಯ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಮತ್ತು ಶ್ರೀ ಮುಸ್ತಫ ಯುವ ಸಮಿತಿ ಸದಸ್ಯರು ಭಾಗವಹಿಸಿದ್ದರು.

* ಜನವರಿ 26 ರಂದು 74ನೇ ಗಣರಾಜ್ಯೋತ್ಸವವನ್ನು ಧ.ರಾ.ಮ ಸ್ಕೌಟ್ ಭವನದಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಎ.ಪಿ. ಷಡಾಕ್ಷರಪ್ಪ, ಶ್ರೀ ಬೂಸ್ನೂರು ವಿಶ್ವನಾಥ್, ಜಿಲ್ಲಾ ಖಜಾಂಚಿಗಳು, ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀ ಎಸ್. ಶಂಕರ್ ನಾಯ್ಕ್, ಶ್ರೀ ಡಿ. ಹಾಲಪ್ಪ, ಜಿಲ್ಲಾ ಸಹಾಯಕ ಆಯುಕ್ತರು, ಮಾಜಿ ಎ.ಎಸ್.ಓ.ಸಿ. ಶ್ರೀ ನೂರುಲ್ಲಾ, ಶ್ರೀ ಜೆ.ಎಸ್. ವಿಜಯ್, ದಾವಣಗೆರೆ ದಕ್ಷಿಣ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಹಾಗೂ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಉಪಸ್ಥಿತರಿದ್ದರು.

* ಜನವರಿ 26 ರಂದು 74ನೇ ಗಣರಾಜ್ಯೋತ್ಸವದ ಪ್ರಯುಕ್ತ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಪಥಚಲನೆ ಕಾರ್ಯಕ್ರಮದಲ್ಲಿ ಆನಗೋಡಿನ ಶ್ರೀ ಸಿದ್ದೇಶ್ವರ ಶಾಲೆಯ ಸ್ಕೌಟ್ಸ್ ಮತ್ತು ಸೆಂಟ್ ಪಾಲ್ಸ್ ಕಾನ್ವೆಂಟ್



ಶಾಲೆಯ ಗೈಡ್ಸ್‌ಗಳು ಭಾಗವಹಿಸಿದ್ದರು. ಇದರಲ್ಲಿ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯ ಗೈಡ್ಸ್‌ಗಳು ತೃತೀಯ ಬಹುಮಾನ ಪಡೆದರು.

* ಫೆಬ್ರವರಿ 02 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ಕೌಟ್ಸ್ ಮಕ್ಕಳು ಕುಕ್ಕಿಂಗ್ ವಿಥೌಟ್ ಫೈಯರ್ ಚಟುವಟಿಕೆಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀಮತಿ ಅನಸೂಯ ಶಾಲಾ ಆಡಳಿತಾಧಿಕಾರಿಗಳು, ಶ್ರೀ ನಿರಂಜನ್ ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ, ಶ್ರೀಮತಿ ನಳಿನಿ ಲೇಡಿ ಸ್ಕೌಟ್ ಮಾಸ್ಟರ್, ಶ್ರೀ ಸುರೇಶ್ ಸ್ಥಳೀಯ ಸಂಸ್ಥೆ, ಕಾರ್ಯದರ್ಶಿಗಳು, ಶ್ರೀ ಮುಸ್ತಫ ಯುವ ಸಮಿತಿ ಅಧ್ಯಕ್ಷರು ಉಪಸ್ಥಿತರಿದ್ದರು.



* ಫೆಬ್ರವರಿ 03 ರಂದು ಆರ್.ವಿ.ಜಿ.ಕೆ ಪ್ರೌಢ ಶಾಲೆಯಲ್ಲಿ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 135 ಸ್ಕೌಟ್ಸ್, 81 ಗೈಡ್ಸ್, 36 ಕಬ್ಸ್, 30 ಬುಲ್‌ಬುಲ್ಸ್‌ಗಳು ಭಾಗವಹಿಸಿದ್ದರು. ಸ್ಕೌಟ್ ವಿಭಾಗದ ನಾಯಕರಾಗಿ, ಶ್ರೀ ಹಾಲಪ್ಪ ಡಿ., ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್, ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಗದಿಗೆವ್ವ ಓಲೆಕಾರ್, ಗೈಡ್‌ಕ್ಯಾಪ್ಟನ್, ಕಬ್ ವಿಭಾಗದ ನಾಯಕರಾಗಿ ಶ್ರೀಮತಿ ಮಂಜುಳ, ಲೇಡಿಕಬ್ ಮಾಸ್ಟರ್, ಕಾರ್ಯನಿರ್ವಹಿಸಿದರು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಸಹಾಯಕ ಆಯುಕ್ತರು (ಗೈಡ್), ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಭಾಗವಹಿಸಿದ್ದರು.

* ಫೆಬ್ರವರಿ 05 ರಂದು ಅನ್‌ಮೋಲ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ನಾಗನೂರು ಗ್ರಾಮದಲ್ಲಿರುವ ಜಮೀನುಗಳಿಗೆ ತೆರಳಿ ಭತ್ತದ ನಾಟಿ ಮಾಡುವ ವಿಧಾನವನ್ನು ಪ್ರಾಯೋಗಿಕವಾಗಿ ತಿಳಿದುಕೊಂಡರು. ಈ ಸಂದರ್ಭದಲ್ಲಿ ಶ್ರೀ ರವೀಂದ್ರಸ್ವಾಮಿ ಟಿ.ಎಂ. ಮತ್ತು ಶ್ರೀ ವಿಜಯ್ ಸ್ಕೌಟ್ ಮಾಸ್ಟರ್ಸ್ ಉಪಸ್ಥಿತರಿದ್ದರು.

* ಫೆಬ್ರವರಿ 06 ರಂದು ಹೊನ್ನಾಳಿ ಸ್ಥಳೀಯ ಸಂಸ್ಥೆ ವತಿಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಗುರು ಭವನದಲ್ಲಿ ಆಯೋಜಿಸಲಾಗಿತ್ತು. ಸ್ಕೌಟ್ಸ್ 20, ಗೈಡ್ಸ್ 48, ಕಬ್ಸ್ 37, ಬುಲ್‌ಬುಲ್ಸ್ 19, ಮಕ್ಕಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿದ್ದರು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಹೇಮಂತ್ ಸ್ಕೌಟ್ ಮಾಸ್ಟರ್, ಗೈಡ್ ವಿಭಾಗದ ನಾಯಕರಾಗಿ, ಶ್ರೀಮತಿ ಸುಧಾ ಗೈಡ್ ಕ್ಯಾಪ್ಟನ್, ಕಬ್ ವಿಭಾಗದ ನಾಯಕರಾಗಿ, ಶ್ರೀ ಆಂಜನೇಯ ಮತ್ತು ಬುಲ್‌ಬುಲ್ ವಿಭಾಗದ ನಾಯಕರಾಗಿ ಶ್ರೀಮತಿ ಕೆ.ಬಿ. ನೀಲಮ್ಮ, ಕಾರ್ಯನಿರ್ವಹಿಸಿದರು. ಜಿಲ್ಲಾ

ಸಂಸ್ಥೆಯಿಂದ ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು. ಶ್ರೀಮತಿ ಭೂದೇವಿ ಸಾಲಿಮಠ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಶಿಬಿರವನ್ನು ನಡೆಸಿಕೊಟ್ಟರು.

* ಫೆಬ್ರವರಿ 09 ರಿಂದ 11 ರವರೆಗೆ ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 303 ಕಬ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಕಬ್ ವಿಭಾಗದ ನಾಯಕರಾಗಿ ಶ್ರೀ ಆಂಜನೇಯ, ಬುಲ್‌ಬುಲ್ ವಿಭಾಗದ ನಾಯಕರಾಗಿ ಶ್ರೀಮತಿ ಎಸ್. ಸಿದ್ದಮ್ಮ, ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಹಾಲಪ್ಪ ಡಿ., ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ರತ್ನ ಎಮ್., ರೋವರ್ ವಿಭಾಗದ ನಾಯಕರಾಗಿ ಡಾ॥ ರಾಕೇಶ್ ಮತ್ತು ರೇಂಜರ್ ವಿಭಾಗದ ನಾಯಕರಾಗಿ ಡಾ॥ ಶಕುಂತಲಾ ಕಾರ್ಯನಿರ್ವಹಿಸಿದರು. ಜಿಲ್ಲಾ ಸಂಸ್ಥೆ ಪರವಾಗಿ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದಾ ಮಗಾನಳ್ಳಿ ಜಿಲ್ಲಾ ಸಹಾಯಕ ಆಯುಕ್ತರು ಶಿಬಿರಕ್ಕೆ ಭೇಟಿ ನೀಡಿ ಮಕ್ಕಳನ್ನು ಪರೀಕ್ಷೆ ಎದುರಿಸಲು ಪ್ರೋತ್ಸಾಹಿಸಿದರು. ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಮತ್ತು ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಶಿಬಿರವನ್ನು ಆಯೋಜಿಸಿದ್ದರು.

* ಫೆಬ್ರವರಿ 13 ರಂದು ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ವತಿಯಿಂದ ಚುನಾವಣಾ ವೋಟಿಂಗ್ ಯಂತ್ರದ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸೆಂಟ್ ಪಾಲ್ಸ್ ಪಿ.ಯು. ಕಾಲೇಜಿನ ರೇಂಜರ್ಸ್‌ಗಳು ವೋಟಿಂಗ್ ಯಂತ್ರದ ಬಗ್ಗೆ ಮಾಹಿತಿ ಪಡೆದರು.

## ಹಾಸನ

ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ನಿಪುಣ್ ಪರೀಕ್ಷಾ ಶಿಬಿರವನ್ನು ಜನವರಿ 21 ರಿಂದ 23ರ ವರೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಭವನದಲ್ಲಿ ಹಮ್ಮಿಕೊಂಡಿದ್ದು, ಈ ಶಿಬಿರದಲ್ಲಿ ಒಟ್ಟು 242 ರೋವರ್ಸ್ ರೇಂಜರ್ಸ್ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ವೈ.ಎಸ್. ವೀರಭದ್ರಪ್ಪನವರು ಉದ್ಘಾಟಿಸಿ, "ವರದಕ್ಷಿಣೆ ಒಂದು ಸಾಮಾಜಿಕ ಪಿಡುಗಾಗಿದೆ ಎಷ್ಟೋ ಹೆಣ್ಣು ಮಕ್ಕಳು ಇದರಿಂದ ಸಾವಿಗೀಡಾಗುತ್ತಿದ್ದಾರೆ. ಇದನ್ನು ತಪ್ಪಿಸಲು ತಮ್ಮಂತಹ ಯುವಜನಾಂಗ ಇದಕ್ಕೆ ಕೈಜೋಡಿಸಬೇಕು" ಎಂದು ಹೇಳುತ್ತಾ ಇದೇ ಸಂದರ್ಭಲ್ಲಿ ಭಾಗವಹಿಸಿದ ರೋವರ್ಸ್‌ಗಳಿಂದ ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡಿಸಿದರು. ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಗಿರಿಜಾಂಬಿಕಾರವರು ಪ್ಲಾಸ್ಟಿಕ್‌ನಿಂದ ಆಗುವ ಅನಾನುಕೂಲಗಳ ಬಗ್ಗೆ ತಿಳಿಸಿ ಪ್ಲಾಸ್ಟಿಕ್ ಮುಕ್ತ ದೇಶವನ್ನಾಗಿ ಮಾಡಲು ನಾವೆಲ್ಲಾ ಶ್ರಮಿಸಬೇಕೆಂದು ಕರೆಕೊಟ್ಟು, ಈ ಪರೀಕ್ಷೆಯು ಯಶಸ್ವಿಯಾಗಿ ನಡೆಯಲಿ ಎಂದು ಶುಭಹಾರೈಸಿದರು. ಜಿಲ್ಲಾ ಕಾರ್ಯದರ್ಶಿಯಾದ ಶ್ರೀ ಸುರೇಶ್ ಗುರೂಜಿ ಮಾತನಾಡಿ "ಸುಂದರ ಬದುಕು ಹಾಗೂ ಆರೋಗ್ಯಕರ ಸಮಾಜ ಕಟ್ಟುವಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಶಿಸ್ತು ಮತ್ತು ಕೌಶಲ್ಯದ ಪಾತ್ರ ಮಹತ್ವದ್ದಾಗಿದೆ ಅದರಲ್ಲಿ ಪರೀಕ್ಷಾ ಶಿಬಿರವು ಒಂದು ಮಹತ್ವದ ಪಾತ್ರ



ವಹಿಸುತ್ತದೆ. ಮುಂದಿನ ರಾಜ್ಯ ಪುರಸ್ಕಾರ್‌ಕ್ಕೆ ಪೂರ್ವ ತಯಾರಿಯಾಗಿದೆ" ಎಂದು ತಿಳಿಸಿದರು. ರೋವರ್ ವಿಭಾಗದ ನಾಯಕರಾಗಿ ಬೇಲೂರು ವೈ.ಡಿ.ಡಿ. ಕಾಲೇಜಿನ ರೋವರ್ ಸ್ಕೌಟ್ ಲೀಡರ್ ಶ್ರೀ ವೀರಭದ್ರಪ್ಪ, ರೇಂಜರ್ ವಿಭಾಗದ ನಾಯಕಿಯಾಗಿ ಎ.ಎಸ್.ಓ.ಸಿ. ಶ್ರೀ ಪ್ರಿಯಾಂಕ ಕಾರ್ಯನಿರ್ವಹಿಸಿದರು. ಈ ಕಾರ್ಯಕ್ರಮದ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ವೈ.ಎಸ್. ವೀರಭದ್ರಪ್ಪನವರು ವಹಿಸಿದ್ದರು. ರೋವರ್ ವಿಭಾಗದ ಲೀಡರ್ ಶ್ರೀ ವೀರಭದ್ರಪ್ಪನವರು ಮೂರು ದಿನಗಳಿಂದ ನಡೆದ ಶಿಬಿರದ ಬಗ್ಗೆ ವಿವರ ನೀಡಿದರು. ಎ.ಎಸ್.ಓ.ಸಿ ಪ್ರಿಯಾಂಕ ಹೆಚ್.ಎಂ. ರವರು ನಿರೂಪಿಸಿದರು ನಂತರ ಪರೀಕ್ಷೆಯಲ್ಲಿ ಉತ್ತೀರ್ಣರಾದ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

* ಸಕಲೇಶಪುರ ತಾಲ್ಲೂಕು ಸಂಸ್ಥೆಯ ರೋಟರಿ ಶಾಲೆಯಲ್ಲಿ ರಾಷ್ಟ್ರೀಯ ಮತದಾನ ದಿನ ಆಚರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಜಿಲ್ಲಾ ಸಂಸ್ಥೆ ವತಿಯಿಂದ 74ನೇ ಗಣರಾಜ್ಯೋತ್ಸವ ದಿನಾಚರಣೆಯ ಕಾರ್ಯಕ್ರಮವನ್ನು ಜನವರಿ 26 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು. ಧ್ವಜಾರೋಹಣವನ್ನು ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಗಿರಿಜಾಂಬಿಕಾ ಎಂ. ರವರು ನೇರವೇರಿಸಿದರು. ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಕಾಂಚನಮಾಲರವರು ಮಕ್ಕಳಿಗೆ ಶುಭಾಶಯಗಳನ್ನು ಹೇಳಿದರು.



* 74ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಪಥ ಸಂಚಲನ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಎಂ.ಜಿ. ರಸ್ತೆ, ಹಾಸನ ಇಲ್ಲಿನ ರೇಂಜರ್ ವಿದ್ಯಾರ್ಥಿಗಳು ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿರುತ್ತಾರೆ. ಶ್ರೀ ಬಸವರಾಜೇಂದ್ರ ಪ್ರೌಢ ಶಾಲೆ, ಹಾಸನ

ಇವರು ದ್ವಿತೀಯ ಸ್ಥಾನ ಪಡೆದುಕೊಂಡಿರುತ್ತಾರೆ. ಸಂತ ಫಿಲೋಮಿನಾ ಪ್ರೌಢ ಶಾಲೆ, ಹಾಸನ ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜನವರಿ 26 ರಂದು ಚನ್ನರಾಯಪಟ್ಟಣ ತಾಲ್ಲೂಕು ಸಂಸ್ಥೆಯ ಅಂಬಿಕಾ ವಿದ್ಯಾ ಸಂಸ್ಥೆ ಶ್ರವಣಬೆಳಗೊಳ ಶಾಲೆಯ ಮಕ್ಕಳು ಗಣರಾಜ್ಯೋತ್ಸವದ ಅಂಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಜಾಥ ಕಾರ್ಯಕ್ರಮವನ್ನು ಮಾಡಿರುತ್ತಾರೆ ಹಾಗೂ ಇದೇ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರಮಾಣ ಪತ್ರವನ್ನು ವಿತರಣೆ ಮಾಡಿ ಮಕ್ಕಳಿಗೆ ಶುಭ ಹಾರೈಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಪುಷ್ಪರಾಜ್ ಶಾಲಾ ಮುಖ್ಯಸ್ಥರು ಹಾಗೂ ಎಡಿಸಿ ಚನ್ನರಾಯಪಟ್ಟಣ ತಾಲ್ಲೂಕು ವಹಿಸಿದ್ದರು. ಸ್ಕೌಟ್ ಮಾಸ್ಟರ್ ಹಾಗೂ ಗೈಡ್ ಕ್ಯಾಪ್ಟನ್ ಉಪಸ್ಥಿತರಿದ್ದರು.

* ಜನವರಿ 28 ರಂದು ಹಾಸನ ಜಿಲ್ಲಾ ಸಂಸ್ಥೆಯ ವತಿಯಿಂದ ಬೇಲೂರು ಸ್ಥಳೀಯ ಸಂಸ್ಥೆಯ ಚಿಕ್ಕಮೇದೂರು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾಲ್ಲೂಕು ಮಟ್ಟದ ದ್ವಿತೀಯ ಸೋಪಾನ ಹಾಗೂ ಜಿಲ್ಲಾ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಪರೀಕ್ಷಾ ಶಿಬಿರದ ಅಧ್ಯಕ್ಷತೆಯನ್ನು ಶ್ರೀಯುತ ಮುರಳಿ (ಕಾಫಿ ಬೆಳೆಗಾರರು ಹಾಗೂ ರೋಟರಿ ಸಂಸ್ಥೆಯ ಸದಸ್ಯರು) ವಹಿಸಿಕೊಂಡಿದ್ದರು. ಜಿಲ್ಲಾ ಸಂಸ್ಥೆ ವತಿಯಿಂದ ಗೈಡ್ ಆಯುಕ್ತರಾದ ಶ್ರೀಮತಿ ಗಿರಿಜಾಂಬಿಕಾ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಸುರೇಶ್ ಗುರೂಜಿ ಭಾಗವಹಿಸಿದ್ದರು. ಶಿಬಿರದ ನಾಯಕರುಗಳಾಗಿ ಶ್ರೀ ಪರಮೇಶ್ವರಪ್ಪ (ಸ್ಕೌಟ್ ವಿಭಾಗ) ಶ್ರೀಮತಿ ಬಿ.ಎಲ್. ಮಮತ (ಗೈಡ್ ವಿಭಾಗ) ಶ್ರೀ ಪರಶುರಾಮಪ್ಪ ಎಮ್. (ಕಬ್ ವಿಭಾಗ) ಶ್ರೀಮತಿ ಎಲ್.ಎಸ್. ವಾಣಿ (ಫ್ಲಾಕ್ ವಿಭಾಗ) ಪರೀಕ್ಷಾ ಶಿಬಿರವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

* ಜನವರಿ 31 ರಂದು ಸಕಲೇಶಪುರ ತಾಲ್ಲೂಕು ಸ್ಥಳೀಯ ಸಂಸ್ಥೆಯ ವತಿಯಿಂದ ಸಂತ ಜೋಸೆಫರ ಶಾಲೆ, ಸಕಲೇಶಪುರ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಪರೀಕ್ಷಾ ಶಿಬಿರದಲ್ಲಿ 108 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ. ಸ್ಕೌಟ್ ವಿಭಾಗಕ್ಕೆ ನಾಯಕರಾಗಿ ಶ್ರೀ ಉಮೇಶ್ ಹಾಗೂ ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಚಂದ್ರಮತಿರವರು ಕಾರ್ಯವನ್ನು ನಿರ್ವಹಿಸಿರುತ್ತಾರೆ. ಅದೇ ರೀತಿ ಕಾರ್ಯಕ್ರಮದ ಎಲ್ಲಾ ಉಸ್ತುವಾರಿಯನ್ನು ಸಹಾಯಕ ಜಿಲ್ಲಾ ಆಯುಕ್ತರಾದ ಶ್ರೀ ಕೀರ್ತಿಕುಮಾರ್‌ರವರು ನಿರ್ವಹಿಸಿರುತ್ತಾರೆ.



## ಕಾರವಾರ (ಉ.ಕ.)

ಜನವರಿ 01 ರಂದು ಕಾರವಾರ ಜಿಲ್ಲೆಯಿಂದ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಭಾಗವಹಿಸಿ ಜಿಲ್ಲೆಗೆ 'ಎ' ಗ್ರೇಡ್ ತಂದುಕೊಟ್ಟ ಸ್ಕೌಟ್-ಗೈಡ್ ಶಿಕ್ಷಕರುಗಳು, ಪದಾಧಿಕಾರಿಗಳಿಗೆ ಗೌರವ ಅಭಿನಂದನಾ ಕಾರ್ಯಕ್ರಮ ನಡೆಯಿತು. ಈ ಸಂರ್ಭದಲ್ಲಿ ಮಾನ್ಯ ಶ್ರೀ ಜಿ.ಎಸ್. ನಾಯಕ್, ಹೊನ್ನಾವರ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಜಿ.ಎಸ್. ಭಟ್, ಡಯಟಿನ ಶಿಕ್ಷಣಾಧಿಕಾರಿಗಳು, ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು ಶ್ರೀಮತಿ ಶೋಭಾ ಕುಲರ್ಣಿ, ಜಿಲ್ಲಾ ಆಯುಕ್ತರು (ಗೈ), ಕೋಶಾಧಿಕಾರಿಗಳು, ಜಿಲ್ಲಾ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.



* ಜನವರಿ 12 ರಂದು ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ಜಯಂತಿಯ ಅಂಗವಾಗಿ ಯುವ ದಿನಾಚರಣೆಯನ್ನು ಆಚರಿಸಲಾಯಿತು.ಹೊನ್ನಾವರದ ಎಂ.ಪಿ.ಈ. ಸೊಸೈಟಿಯ ಸೆಂಟ್ರಲ್ ಸ್ಕೂಲಿನಲ್ಲಿ Youth Day ಕಾರ್ಯಕ್ರಮವನ್ನು ಆಚರಿಸಿದರು.

* ಸ್ವಾಮಿ ವಿವೇಕಾನಂದರ ಜಯಂತಿಯ ಅಂಗವಾಗಿ ಹೊನ್ನಾವರದ ನ್ಯೂ ಇಂಗ್ಲೀಷ್ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಂದ ಸರ್ವಧರ್ಮ ಪ್ರಾರ್ಥನೆ ಹಾಗೂ ವಿವೇಕಾನಂದರವರ ಜೀವನ ಚರಿತ್ರೆಯ ಬಗ್ಗೆ ಭಿತ್ತಿ ಪತ್ರಗಳನ್ನು ಪ್ರದರ್ಶಿಸಲಾಯಿತು.

* ಕುಮಟಾದ ಹೊನ್ನಕೆರೆ ಶಾಲೆ, ವನ್ನಳ್ಳಿ ಶಾಲೆ ಮುಂತಾದ ಕಡೆಗಳಲ್ಲಿ ವಿವೇಕಾನಂದರ ಜಯಂತಿಯನ್ನು ಯುವ ದಿನಾಚರಣೆಯನ್ನಾಗಿ ಆಚರಿಸಿದರು.

* ಜನವರಿ 24ರಂದು ಕಾರವಾರ ಜಿಲ್ಲೆಯ ಹೊನ್ನಾವರ ಸ್ಥಳೀಯ ಸಂಸ್ಥೆಯಿಂದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆ ಹೊಸಪಟ್ಟಣದಲ್ಲಿ ಸುಭಾಷ್ ಚಂದ್ರಬೋಸ್‌ರವರ ಜನ್ಮ ದಿನಾಚರಣೆ ಅಂಗವಾಗಿ ನೂತನ ಕಬ್ ದಳ ಪ್ರಾರಂಭ ಮಾಡಲಾಯಿತು. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಧ್ಯಕ್ಷರು, ಸದಸ್ಯರು ಸಮವಸ್ತ್ರವನ್ನು ನೀಡಿದರು ಇವರಿಗೆ ಸ್ಥಳೀಯ ಸಂಸ್ಥೆ ಮತ್ತು ಶಾಲಾ ವತಿಯಿಂದ ಗೌರವ ಅಭಿನಂದನೆಯನ್ನು ಸಲ್ಲಿಸಲಾಯಿತು.

* ಜನವರಿ 25 ರಂದು ಹೊನ್ನಾವರದ ನ್ಯೂ ಇಂಗ್ಲೀಷ್ ಶಾಲೆಯಲ್ಲಿ ತಂಬಾಕು ವಿರೋಧಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಗ್ಗೆ ಆರೋಗ್ಯ ಅಧಿಕಾರಿಗಳು ಮಾಹಿತಿಯನ್ನು ನೀಡಿದರು. ನಂತರ ಇದೇ ಸಂದರ್ಭದಲ್ಲಿ ಮತದಾನದ ಬಗ್ಗೆ ಜಾಗೃತಿ

ಕಾರ್ಯವನ್ನು ನಡೆಸಿ ಪ್ರತಿಜ್ಞಾಬೋಧಿಸಿದರು. ನಂತರ ಮಕ್ಕಳು ಜನಜಾಗೃತಿ ಜಾಥ ನಡೆಸಿದರು 180 ಮಕ್ಕಳು ಭಾಗವಹಿಸಿದ್ದರು.

* ಜನವರಿ 25 ರಂದು ಹೊನ್ನಾವರದ ಖರ್ವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕಬ್– ಬುಲ್‌ಬುಲ್–7, ಮಕ್ಕಳಿಗೆ ಸಮವಸ್ತ್ರವನ್ನು ಗ್ರಾಮ ಪಂಚಾಯತಿ ವತಿಯಿಂದ ನೀಡಿರುತ್ತಾರೆ ಇವರಿಗೆ ಶಾಲಾ ವತಿಯಿಂದ ಅಭಿನಂದಿಸಲಾಯಿತು.

* ಜನವರಿ 27 ರಿಂದ 31ರ ವರೆಗೆ ಜಿಲ್ಲೆಯ ಐದು ತಾಲೂಕುಗಳಲ್ಲಿ ರಾಜ್ಯ ಸಂಸ್ಥೆಯಿಂದ ನೀಡಿದ ಸ್ಕೌಟ್ ಮತ್ತು ಗೈಡ್ ಕ್ಯಾಲೆಂಡರ್‌ಗಳನ್ನು ಶ್ರೀ ದಿನಕರ್ ಶೆಟ್ಟಿ ಹೊನ್ನಾವರ ಕುಮಟಾ ಶಾಸಕರು, ಶ್ರೀ ಎಸ್.ವಿ. ಸಂಕನೂರ್ ವಿಧಾನಸಭಾ ಸದಸ್ಯರು, ಶ್ರೀ ಪ್ರಭುಲಿಂಗ ಕವಳಿಕಟ್ಟಿ ಐಎಎಸ್, ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಕಾರವಾರ, ಶ್ರೀ ಈಶ್ವರ ಕುಮಾರ ಕಾಂದೂ ಐಎಎಸ್, ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಮಾನ್ಯ ಶ್ರೀ ಸಿ.ಟಿ. ಜಯಕುಮಾರ್ ಕೆ.ಎಸ್.ಪಿ.ಎಸ್. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳು, ಮಾನ್ಯ ಶ್ರೀ ರಾಜು ಮಗವೀರ್ ಸಹಾಯಕ ಜಿಲ್ಲಾಧಿಕಾರಿಗಳು, ಡಾ. ಜಿ.ಜಿ. ಸಭಾಹಿತ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಈಶ್ವರ್ ನಾಯ್ಕ್ ಉಪನಿರ್ದೇಶಕರು ಆಡಳಿತ ಹಾಗೂ ಜಿಲ್ಲಾ ಆಯುಕ್ತ ಸ್ಕೌಟ್



ಶ್ರೀ ಎನ್.ಜಿ. ಎ.ಜಿ. ನಾಯಕ್, ಡಯಟ್ ಪ್ರಾಂಶುಪಾಲರು ಮಾನ್ಯ ಶ್ರೀಮತಿ ಮಮತಾ ದೇವಿ, ಉಪವಿಭಾಗ ಅಧಿಕಾರಿಗಳು ಭಟ್ಕಳ ಹೊನ್ನಾವರ, ಶ್ರೀ ಅಶೋಕ್ ಭಟ್, ತಹಸಿಲ್ದಾರ್ ಭಟ್ಕಳ ಮಾನ್ಯ ಶ್ರೀನಾಗರಾಜ್ ನಾಯ್ಕರ್, ತಹಶೀಲ್ದಾರ್ ಹೊನ್ನಾವರ ಮಾನ್ಯ ಶ್ರೀ ವಿವೇಕ್ ಶನ್ವಿ, ತಹಸಿಲ್ದಾರ್, ಕುಮಟಾ, ಶ್ರೀ ಸತೀಶ್ ಎಂ. ಗೌಡ ತಹಸಿಲ್ದಾರ್ ಅಂಕೋಲಾ, ಮಾನ್ಯ ಶ್ರೀ ಎನ್.ಎಫ್. ನರೋನ ತಹಸಿಲ್ದಾರ್ ಕಾರವಾರ ಶ್ರೀ ದೇವಿದಾಸ ಮೊಗೇರ ಶ್ರೀ ಜಿ.ಎಸ್. ನಾಯಕ್, ಶ್ರೀ ಆರ್.ಎಲ್. ಭಟ್, ಶ್ರೀಮತಿ ಮಂಗಳಾದೇವಿ. ಪಾಟೀಲ್, ಶ್ರೀರಾಮ ಮೊಗೇರಶ್ರೀ ದುರ್ಗಾದೇವಿ ದೇವಸ್ಥಾನ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಜಿಲ್ಲಾ, ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳಿಗೆ, ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ನೀಡಿದರು.

* ಜನವರಿ 31 ರಂದು ಕಾರವಾರ ಸ್ಥಳೀಯ ಸಂಸ್ಥೆ ವತಿಯಿಂದ ಗುರುಭವನದಲ್ಲಿ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಉದ್ಘಾಟನಾ ಕಾರ್ಯಕ್ರಮಕ್ಕೆ ಮಾನ್ಯ ಶ್ರೀ ಈಶ್ವರ ನಾಯಕ್, ಉಪ ನಿರ್ದೇಶಕರು ಹಾಗೂ ಆಯುಕ್ತರು (ಸ್ಕೌಟ್), ಶ್ರೀ ಶಾಂತೇಶ್ ನಾಯಕ್ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶ್ರೀಮತಿ ಛಾಯಾಜಾವ್ಕರ್, ಉಪಾಧ್ಯಕ್ಷರು, ಶ್ರೀ ಬಿ.ಡಿ. ಫರ್ನಾಂಡಿಸ್, ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್, ಶಿಬಿರದ ನಾಯಕರಾಗಿ ಶ್ರೀ ಮನ್ಸೂರ್ ವಾಯ್ ಮುಲ್ಲಾ ಗೈಡ್ ನಾಯಕಿಯಾಗಿ ಶ್ರೀಮತಿ ಶೋಭಾ ವರ್ಣೇಕರ್ ಶ್ರೀ ಆರ್.ಕೆ. ದುರ್ಗೆಕರ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ಸ್ಕೌಟ್–ಗೈಡ್ ಶಿಕ್ಷಕರು ಹಾಗೂ 88 ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಕೊಡಗು

ಜಿಲ್ಲೆಗೆ ನೂತನವಾಗಿ ಆಗಮಿಸಿರುವ ಪೋಲೀಸ್ ವರಿಷ್ಠಾಧಿಕಾರಿಗಳು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಉಪಾಧ್ಯಕ್ಷರು ಆಗಿರುವ ಶ್ರೀ ಕೆ. ರಾಮರಾಜನ್ ಐ.ಪಿ.ಎಸ್. ಇವರನ್ನು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯುರವರು ಕಂಠವಸ್ತ್ರ ಹಾಕುವುದರ ಮೂಲಕ ಜಿಲ್ಲಾ ಸಂಸ್ಥೆಗೆ ಆತ್ಮೀಯವಾಗಿ ಸ್ವಾಗತಿಸಿದರು. ಈ ಸಂದರ್ಭ ಸ್ಕೌಟ್ಸ್ ಆಯುಕ್ತರಾದ ಶ್ರೀ ಜಿಮ್ಮಿ ಸ್ವಿಕೇರಾ ಉಪಸ್ಥಿತರಿದ್ದರು. ಇದೇ ಸಂದರ್ಭ 23ನೇ ಸಾಲಿನ ಕ್ಯಾಲೆಂಡರ್‌ರನ್ನು ನೀಡಲಾಯಿತು.



* ಫೆಬ್ರವರಿ 7 ರಂದು ಪೊನ್ನಮ್ಮ ಕುಶಾಲಪ್ಪ ಸ್ಕೌಡ್–ಗೈಡ್ ಭವನ ಮಡಿಕೇರಿ ಇಲ್ಲಿ ಜಿಲ್ಲಾ ಪುರಸ್ಕಾರ ಪರೀಕ್ಷೆಯನ್ನು ನಡೆಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷೆ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ಐಮುಡಿಯಂಡ ರಾಣಿ ಮಾಚಯ್ಯ, ನಾಡ ಪೆದ ಆಶಾ ಚಲನಚಿತ್ರದಲ್ಲಿ ನಟಿಸಿ ಅತ್ಯುತ್ತಮ ನಾಯಕ ನಟ ಪ್ರಶಸ್ತಿ ಪಡೆದ ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ಬೊಳ್ಳಜಿರ ಬಿ ಅಯ್ಯಪ್ಪ ಮತ್ತು ಗ್ರಾಮೀಣ ಉತ್ತಮ ಶಿಕ್ಷಕ ರತ್ನ ಪ್ರಶಸ್ತಿ ಪಡೆದ ಪೊನ್ನಂಪೇಟೆ ಸ್ಥಳೀಯ ಸಂಸ್ಥೆಯ ಶ್ರೀ ಟಿ.ಕೆ. ವಾಮನ, ಇವರನ್ನು ಸನ್ಮಾನಿಸಲಾಯಿತು ಸಮಾರಂಭದಲ್ಲಿ ಜಿಲ್ಲಾ ಪ್ರಧಾನ ಆಯುಕ್ತರು ಶ್ರೀ ಕೆ.ಟಿ. ಮ್ಯಾಥ್ಯೂ, ಸ್ಥಾನಿಕ ಆಯುಕ್ತರಾದ ಶ್ರೀ ಹೆಚ್.ಆರ್. ಮುತ್ತಪ್ಪ, ಜಿಲ್ಲಾ ತರಬೇತಿ ಆಯುಕ್ತರಾದ ಮೈಥಿಲಿ ರಾವ್, 200ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಆಯಾ ಶಾಲೆಗಳ ತರಬೇತಿ ಶಿಕ್ಷಕರು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



## ಕೋಲಾರ

"ನಮ್ಮ ಪೂರ್ವಜರು ಹಾಕಿಕೊಟ್ಟ ಆಚಾರ–ವಿಚಾರ ಮತ್ತು ಸಂಪ್ರದಾಯಗಳನ್ನು ಇಂದಿನ ಮಕ್ಕಳಿಗೆ ತಲುಪುವಂತಹ ಕಾರ್ಯಕ್ರಮ ಮತ್ತು ಶಿಬಿರಗಳನ್ನು ನಿರಂತರವಾಗಿ ಸಂಘಟಿಸಬೇಕು" ಎಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಕರೆ ನೀಡಿದರು. ಕೋಲಾರ ನಗರದ ಸ್ಕೌಟ್ ಭವನದಲ್ಲಿ ಭಾರತ್ ಸ್ಕೌಟ್ಸ್–ಗೈಡ್ಸ್ ಕೋಲಾರ, ರೋಟರಿ ಕೋಲಾರ ನಂದಿನಿ ಮತ್ತು ಪ್ರಕ್ರಿಯೆ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಮಾತನಾಡಿ "ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸುವ ಮೂಲಕ ಉತ್ತಮ ನಾಗರಿಕರನ್ನು ತಯಾರು ಮಾಡಬಹುದಾಗಿದೆ. ತರಬೇತಿ ಪಡೆದ ಎಲ್ಲಾ ಶಿಕ್ಷಕರು ತಮ್ಮ ಶಾಲಾ ಕಾಲೇಜುಗಳಲ್ಲಿ ವಾರದಲ್ಲಿ ಒಂದು ಅವಧಿಯನ್ನು ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳಲ್ಲಿ ತೊಡಗಿಸಬೇಕು" ಎಂದರು. ಈ ಸಂದರ್ಭದಲ್ಲಿ ಸಂಸ್ಥೆ ಅಧ್ಯಕ್ಷರಾದ ಶ್ರೀ ಬಸಪ್ಪಗೌಡ, ಉಪಾಧ್ಯಕ್ಷರಾದ ಶ್ರೀ ಡಿ.ಎಲ್. ನಾಗರಾಜ್, ಡಾ॥ ಚಂದ್ರಶೇಖರ್ ಮುಂತಾದವರು ಉಪಸ್ಥಿತರಿದ್ದರು.



* ಜನವರಿ 14 ರಂದು ಕೋಲಾರ ಜಿಲ್ಲಾ ಸಂಸ್ಥೆ ರೋಟರಿ ಕೋಲಾರ ನಂದಿನಿ ಮತ್ತು ಚೌಡೇಶ್ವರಿ ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ ವತಿಯಿಂದ ನಗರದ ಸ್ಕೌಟ್ ಭವನದಲ್ಲಿ ಉಚಿತ ಹೊಲಿಗೆ ತರಬೇತಿ ಕೇಂದ್ರವನ್ನು ರಾಜ್ಯ ಪ್ರಧಾನ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಅಧ್ಯಕ್ಷರಾದ ಶ್ರೀ ಬಿ. ಸಪ್ಪಗೌಡ, ಉಪಾಧ್ಯಕ್ಷರಾದ ಶ್ರೀ ಡಿ.ಎಲ್. ನಾಗರಾಜ್, ಡಾ॥ ಚಂದ್ರಶೇಖರ್ ಮುಂತಾದವರು ಉಪಸ್ಥಿತರಿದ್ದರು.




* ಜನವರಿ 26 ರಂದು ಸ್ಕೌಟ್ ಭವನ ಕೋಲಾರ ಇಲ್ಲಿ ಗಣರಾಜ್ಯೋತ್ಸವ ಪ್ರಯುಕ್ತ ಧ್ವಜಾರೋಹಣವನ್ನು ಗೈಡ್ಸ್ ಆಯುಕ್ತರಾದ ಶ್ರೀಮತಿ ಕೆ.ಆರ್. ಜಯಶ್ರೀರವರು ನೇರವೇರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಅಧ್ಯಕ್ಷರಾದ ಶ್ರೀ ಬಸಪ್ಪಗೌಡ, ಜಿಲ್ಲಾ ಮುಖ್ಯ ಆಯುಕ್ತ ಶ್ರೀ ಕೆ.ವಿ. ಶಂಕರಪ್ಪ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಮುಂತಾದವರು ಹಾಜರಿದ್ದರು.

* ಫೆಬ್ರವರಿ 02 ರಿಂದ 03ರ ವರೆಗೆ ಕೋಲಾರ ತಾಲ್ಲೂಕು ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಸ್ಕೌಟ್ ಭವನ ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಸುಮಾರು 350 ಕಬ್ಸ್, ಬುಲ್‌ಬುಲ್ಸ್, ಸ್ಕೌಟ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಫೆಬ್ರವರಿ 08 ರಿಂದ 09ರ ವರೆಗೆ ಮಾಲೂರು ಸ್ಥಳೀಯ ಸಂಸ್ಥೆ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆ ಮಾಲೂರು ಇಲ್ಲಿ ಆಯೋಜಿಸಲಾಗಿತ್ತು. ಸುಮಾರು 384 ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಫೆಬ್ರವರಿ 08 ರಂದು ಮಾಲೂರು ಸ್ಥಳೀಯ ಸ್ಕೌಟರ್ಸ್ ಗೈಡರ್ಸ್ ಸಮಾವೇಶವನ್ನು ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಚಂದ್ರಕಲಾರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮತ್ತು ಜಾಂಬೂರಿಯಲ್ಲಿ ಭಾಗವಹಿಸಿದ್ದ ಸ್ಕೌಟರ್ಸ್ ಮತ್ತು ಗೈಡರ್ಸ್ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತ್ತು.

* ಫೆಬ್ರವರಿ 10 ರಿಂದ 12ರ ವರಿಗೆ ಸರ್ಕಾರಿ ಪ್ರೌಢಶಾಲೆ ಕುರಗಲ್, ಇಲ್ಲಿ ಕೋಲಾರ ಜಿಲ್ಲಾ ಮಟ್ಟದ ನಿಪುಣ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. 34 ರೋವರ್ಸ್ ಮತ್ತು 20 ರೇಂಜರ್ಸ್ ಭಾಗವಹಿಸಿದ್ದರು. ಶಿಬಿರದ ನಾಯಕರಾಗಿ ಶ್ರೀ ವಿಶ್ವನಾಥ್ ವಿ. ಕೋಲಾರ, ರೋವರ್ ವಿಭಾಗ, ಡಾ. ಕೆ.ಆರ್. ಮಂಜುಳ ರೇಂಜರ್ ವಿಭಾಗದ ನಾಯಕಿಯಾಗಿ ಸೇವೆ ಸಲ್ಲಿಸಿದರು. ಶಿಬಿರಕ್ಕೆ ಮಾನ್ಯ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿ, ಶಾಲೆಯ ಮುಖ್ಯ ಶಿಕ್ಷಕರು, ಶಾಲೆಯ ದೈಹಿಕ ಶಿಕ್ಷಕರು ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ಜಿ.ಎಂ. ಶ್ರೀನಿವಾಸ್‌ರವರು ಭೇಟಿ ನೀಡಿದರು.

* ಫೆಬ್ರವರಿ 13 ರಿಂದ 15ರ ವರೆಗೆ ಸ್ಕೌಟ್ ಭವನ ಕೋಲಾರ ಇಲ್ಲಿ ಜಿಲ್ಲಾ ಮಟ್ಟದ ತೃತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರವನ್ನು ನಗರಸಭೆ ಅಧ್ಯಕ್ಷೆ ಶ್ರೀಮತಿ ಶ್ವೇತಾ ಶಬರೀಶ್‌ರವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಶುಭ ಹಾರೈಸಿದರು. ಅವರು ಮಾತನಾಡುತ್ತಾ ಜೀವನ ರೂಪಿಸಿಕೊಳ್ಳಲು ಸ್ಕೌಟ್ಸ್–ಗೈಡ್ಸ್ ಶಿಕ್ಷಣ ಸಹಕಾರಿಯಾಗಿದೆ ಎಂದು ತಿಳಿಸಿದರು. "ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಶಿಕ್ಷಣ ಸಂಸ್ಥೆಯಲ್ಲಿ ಅವಿಭಾಜ್ಯ ಅಂಗವಾಗಿ ಶಾಲಾ ಮಕ್ಕಳಲ್ಲಿ ಎಲ್ಲಾ ರೀತಿಯ ಜೀವನ ಕೌಶಲ್ಯಗಳನ್ನು ಕಲಿಸುತ್ತಾ ಬಂದಿದೆ. ಇಂತಹ ಶಿಕ್ಷಣದಲ್ಲಿ ಎಲ್ಲಾ ಮಕ್ಕಳು ಭಾಗವಹಿಸುವ ಮೂಲಕ ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕು. ಶಿಬಿರವಾಸದಲ್ಲಿ ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳುವ ಮೂಲಕ ಸಮಯ ಹೊಂದಾಣಿಕೆ ಸಹಕಾರತತ್ವ, ನಾಯಕತ್ವ, ಸ್ವಯಂ ಶಿಸ್ತು ಮತ್ತು ಸೇವಾ ಮನೋಭಾವವನ್ನು ರೂಢಿಸಿಕೊಳ್ಳಬಹುದು" ಎಂದು ತಿಳಿಸಿದರು. ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು



ಮಾತನಾಡಿ "ಕೇವಲ ಪ್ರಮಾಣ ಪತ್ರಕ್ಕಾಗಿ ಮಾತ್ರ ಶಿಬಿರದಲ್ಲಿ ಭಾಗವಹಿಸದೇ ಶಿಬಿರದಲ್ಲಿ ಕಲಿಸಿಕೊಡುವ ಜೀವನ ಕೌಶಲ್ಯಗಳಾದ ಪ್ಲಾಸ್ಟಿಕ್ ಮರುಬಳಕೆ, ಪರಿಸರ ಸಂರಕ್ಷಣೆ, ಯೋಗ ಮತ್ತು ವ್ಯಾಯಾಮ ಮುಂತಾದ ಕೌಶಲ್ಯಗಳನ್ನು ರೂಢಿಸಿಕೊಂಡು ತಮ್ಮ ಭವಿಷ್ಯವನ್ನು ರೂಪಿಸಿಕೊಂಡು ಸಮುದಾಯಕ್ಕೆ ಸೇವೆ ಸಲ್ಲಿಸಂತೆ ಸಿದ್ಧರಾಗಲು" ತಿಳಿಸಿದರು. ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷ ಶ್ರೀ ಅಸ್ಲಾಂ ಪಾಷ, ನಗರಸಭೆ ಸದಸ್ಯ ಶ್ರೀ ಮಂಜುನಾಥ, ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಮತ್ತು ಶಿಬಿರದಲ್ಲಿ 178 ಸ್ಕೌಟ್ಸ್ ಮತ್ತು 165 ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದರು.

– ಫೆಬ್ರವರಿ 11 ರಿಂದ 12ರ ವರಿಗೆ ಕರ್ನಾಟಕ ಪಬ್ಲಿಕ್ ಶಾಲೆ ಸೋಮಾಯಾಜನಹಳ್ಳಿ ಶ್ರೀನಿವಾಸಪುರ ತಾಲ್ಲೂಕು ಕೋಲಾರ ಜಿಲ್ಲೆ ಇಲ್ಲಿ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಸುಮಾರು 280 ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಕೊಪ್ಪಳ

ಫೆಬ್ರವರಿ 13 ರಂದು ಗಂಗಾವತಿ ಸ್ಥಳೀಯ ಸಂಸ್ಥೆಯಲ್ಲಿ ಮೂಡಬಿದ್ರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜರುಗಿದ ಪ್ರಥಮ ವಿಶ್ವ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಗೆ ಜಿಲ್ಲೆಯಿಂದ ಸಹಕರಿಸಿದ ಮತ್ತು ಜಾಂಬೂರಿಗೆ ಸಹಾಯ ಮಾಡಿದ ದಾನಿಗಳಾದ, 1) ಸನ್ಮಾನ್ಯ ಶ್ರೀ ಫರಣ್ಣ, ಮುನವಳ್ಳಿ ಮಾನ್ಯ ಶಾಸಕರು ಗಂಗಾವತಿ, 2) ಶ್ರೀ ಸೂರಿಬಾಬು ನೆಕ್ಕುಂಟಿ, ಉದ್ಯಮಿಗಳು ವಿದ್ಯಾನಿಕೇತನ ವಿದ್ಯಾಸಂಸ್ಥೆ ಅಧ್ಯಕ್ಷರು, ಗಂಗಾವತಿ, 3) ಶ್ರೀ ಸರ್ವೇಶ್ ಮಲ್ಲಿಕಾರ್ಜುನ್, ಮಾನ್ಯ ಉದ್ಯಮಿಗಳು, 4) ಶ್ರೀ ಶ್ರೀನಿವಾಸ ಕೆಂದೊಳ್ಳಿ, ಉದ್ಯಮಿಗಳು ಗಂಗಾವತಿ, 5) ಶ್ರೀ ಮಲ್ಲಪ್ಪ, ವ್ಯವಸ್ಥಾಪಕರು ಶ್ರೀನಿವಾಸ ನೆಕ್ಕುಂಟಿ ರೈಸ್ ಮಿಲ್, ಗಂಗಾವತಿ 6) ಶ್ರೀ ರಮೇಶ ಗೌಳಿ, ಸಮಾಜ ಸೇವಕರು ಗಂಗಾವತಿ 7) ಶ್ರೀ ತಿಪ್ಪಣ್ಣ ಜಗದಂಬಾ ಸಮಾಜ ಸೇವಕರು ಗಂಗಾವತಿ 8) ಶ್ರೀ ಶಂಭೋಜಿ, ನಗರಸಭೆ ಸದಸ್ಯರು, ಗಂಗಾವತಿ, ಇವರುಗಳಿಗೆ ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯಾ ರಾಜ್ಯ ಪ್ರಧಾನ ಆಯುಕ್ತರು, ಶ್ರೀ ಹೆಚ್.ಎಮ್. ಸಿದ್ಧರಾಮ ಸ್ವಾಮಿ, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಸರ್ವ ಪದಾಧಿಕಾರಿಗಳು ರಾಜ್ಯ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆಯಿಂದ ಸನ್ಮಾನಿಸಿ, ಗೌರವಿಸಿ ಸರ್ವರಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು.



ಅಂದು ಸಂಜೆ ಶ್ರೀ ಶರಣಬಸವೇಶ್ವರ ವಿದ್ಯಾಸಂಸ್ಥೆ ಕಾರಟಗಿಯಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯಾ ರಾಜ್ಯ ಪ್ರಧಾನ ಆಯುಕ್ತರು ಮತ್ತು ಕಾರ್ಯಕ್ರಮದಲ್ಲಿದ್ದ ಎಲ್ಲಾ ಗಣ್ಯರಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ತಂಡಗಳಿಂದ ಪಥ ಸಂಚಲನದ ಮೂಲಕ ಗೌರವ ವಂದನೆ ಸಲ್ಲಿಸಲಾಯಿತು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಹೆಚ್.ಎಮ್. ಸಿದ್ಧರಾಮ ಸ್ವಾಮಿ, ಜಿಲ್ಲಾ ಮುಖ್ಯ ಆಯುಕ್ತರು ನುಡಿದರು. ಶ್ರೀ ಪಿ.ಜಿ.ಆರ್. ಸಿಂಧ್ಯಾ ರಾಜ್ಯ ಪ್ರಧಾನ ಆಯುಕ್ತರು ಸಸಿಗೆ ನೀರು ಹಾಕುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು ಮತ್ತು ನೂತನ ಕಾರಟಗಿ ಸ್ಥಳೀಯ ಸಂಸ್ಥೆಯ ನಾಮ ಫಲಕ ಉದ್ಘಾಟಿಸಿದರು. ಬೇಡನ್ ಪೋವೆಲ್ ಮತ್ತು ಲೇಡಿ ಬೇಡನ್ ಪೋವೆಲ್ ರವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಕಾರಟಗಿ ಶರಣ ಬಸವೇಶ್ವರ ವಿದ್ಯಾಸಂಸ್ಥೆಯ ಶಾಲೆಯ ಶ್ರೀ ಬಿ.ಜಿ.ಅರಳಿ ಸ್ಕೌಟ್ಸ್ ಘಟಕ ಡಾ॥ ಎ.ಪಿ.ಜೆ ಅಬ್ದುಲ್ ಕಲಾಮ್ ಕಬ್ ಘಟಕದ ನಾಮ ಫಲಕಗಳನ್ನು ಉದ್ಘಾಟಿಸಿ ಸ್ಕೌಟ್ಸ್ & ಗೈಡ್ಸ್ ಸಮಗ್ರ ಚಟುವಟಿಕೆಗಳು ಕೋವಿಡ್–19ನಲ್ಲಿ ಸೇವೆ ಸಲ್ಲಿಸಿದ ಸೇವೆ ಜಾಂಬೂರಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಶುಭ ಕೋರಿದರು. ಜಾಂಬೂರಿಗೆ ಸಹಕರಿಸಿದ ದಾನಿಗಳಿಗೆ ಅಭಿನಂದಿಸಿ ಶುಭ ಕೋರಿದರು. ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಸ್ಕೌಟ್ಸ್ & ಗೈಡ್ಸ್ ವಿದ್ಯಾರ್ಥಿಗಳು ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಮೈಸೂರು

ಫೆಬ್ರವರಿ 03 ರಂದು ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಸ್ಕೌಟ್ ಮತ್ತು ಗೈಡ್ ಕೇಂದ್ರ ಕಚೇರಿಯಲ್ಲಿ ಮೈಸೂರು ಜಿಲ್ಲಾ ಮಟ್ಟದ ರೋವರ್ಸ್ ರೇಂಜರ್ಸ್ ಕಬ್ ಮತ್ತು ಬುಲ್‌ಬುಲ್ ಮಕ್ಕಳಿಗೆ ರ‍್ಯಾಲಿಯನ್ನು ಆಯೋಜಿಸಲಾಗಿತ್ತು. ಈ ರ‍್ಯಾಲಿಯಲ್ಲಿ 850 ಮಂದಿ ಮಕ್ಕಳು ಹಾಗೂ ಶಿಕ್ಷಕರು ಶಿಕ್ಷಕಿಯರು ಭಾಗವಹಿಸಿದ್ದರು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ರ‍್ಯಾಲಿಯನ್ನು ಉದ್ಘಾಟಿಸಿದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ರ‍್ಯಾಲಿಯಲ್ಲಿ ಕಬ್ ಮತ್ತು ಬುಲ್‌ಬುಲ್ಸ್ ಮಕ್ಕಳಿಗೆ ಘನ ವಂದನೆ, ಚಿತ್ರಕಲಾ ಸ್ಪರ್ಧೆ ಹಾಗೂ ಕ್ಲೇ ಮಾಡಲಿಂಗ್ ಬಗ್ಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅದೇ ರೀತಿ ರೋವರ್ಸ್–ರೇಂಜರ್ಸ್‌ಗಳಿಗೆ "ಸ್ವಚ್ಛತಾ ಅಭಿಯಾನ"ದ ಬಗ್ಗೆ ಚಾರ್ಟ್ ಮೇಕಿಂಗ್ ಹಾಗೂ ಅದರ ವಿವರಣೆಯನ್ನು ನೀಡುವ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಸಂಜೆ ನಾಲ್ಕು ಗಂಟೆಗೆ ರ‍್ಯಾಲಿಯನ್ನು ವಿಜೇತರಾದ ಕಬ್ ಮತ್ತು ಬುಲ್‌ಬುಲ್ ತಂಡಗಳಿಗೆ ಬಹುಮಾನವನ್ನು ನೀಡುವ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಟಿ.ಎಸ್. ರವಿಶಂಕರ್, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಪುಷ್ಪವಲ್ಲಿ, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು



ಡಾ. ಕೆ.ಬಿ. ಗುರುಮೂರ್ತಿ, ಶ್ರೀ ಅಜಯ್ ಕುಮಾರ್ ಜೈನ್, ಜಿಲ್ಲಾ ಸಂಘಟಕರುಗಳಾದ ಕೆ. ರಾಮಪ್ರಸಾದ್, ಶ್ರೀ ಆರ್.ಪಿ. ಚಂದ್ರುರವರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸಂಜೆ. 6ಕ್ಕೆ ಭವ್ಯ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀ ಬಿ.ಕೆ. ಬಸವರಾಜು, ಜಂಟಿ ರಾಜ್ಯ ಕಾರ್ಯದರ್ಶಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು ಈ ಸಂದರ್ಭದಲ್ಲಿ ಅತ್ಯುತ್ತಮ ಕಾರ್ಯಕ್ರಮಗಳನ್ನು ನೀಡಿದ ರೋವರ್ ಮತ್ತು ರೇಂಜರ್ ತಂಡಗಳಿಗೆ ಬಹುಮಾನವನ್ನು ನೀಡಲಾಯಿತು.

* ಫೆಬ್ರವರಿ 04 ರಂದು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಮೈಸೂರು ಜಿಲ್ಲೆಯ ಸ್ಕೌಟ್ಸ್-ಗೈಡ್ಸ್, ರೋವರ್-ರೇಂಜರ್‌ಗಳ ರ್‍ಯಾಲಿಯನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ 1,300 ಸ್ಕೌಟ್-ಗೈಡ್, ರೋವರ್-ರೇಂಜರ್, ಶಿಕ್ಷಕ-ಶಿಕ್ಷಕಿಯರು ಭಾಗವಹಿಸಿದ್ದರು. ಶ್ರೀ ಶಿವಕುಮಾರ್ ಪೂಜ್ಯ ಮಹಾಪೌರರು ಮೈಸೂರು ಮಹಾನಗರ ಪಾಲಿಕೆರವರು ಈ ರ್‍ಯಾಲಿಯನ್ನು ಉದ್ಘಾಟಿಸಿದರು. ಶ್ರೀ ರಾಮಚಂದ್ರ ರಾಜೇ ಅರಸ್, ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರುರವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಟಿ.ಎಸ್. ರವಿಶಂಕರ್, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಪುಷ್ಪವಲ್ಲಿ, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು ಡಾ. ಕೆ.ಬಿ. ಗುರುಮೂರ್ತಿ, ಶ್ರೀ ಅಜಯ್ ಕುಮಾರ್ ಜೈನ್, ಜಿಲ್ಲಾ ಸಂಘಟಕರುಗಳಾದ ಶ್ರೀ ಕೆ. ರಾಮಪ್ರಸಾದ್, ಶ್ರೀ ಆರ್.ಪಿ. ಚಂದ್ರುರವರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಈ ರ್‍ಯಾಲಿಯಲ್ಲಿ ಸ್ಕೌಟ್-ಗೈಡ್ ಮಕ್ಕಳಿಗೆ ಸುಧಾರಿತ ಗುಡಾರ ನಿರ್ಮಾಣ, ಸಂದೇಶ ರವಾನೆ ಮತ್ತು ಗೀತ ಗಾಯನ ಹಾಗೂ ಸಮೂಹ ನೃತ್ಯ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸಂಜೆ 4ಕ್ಕೆ ರ್‍ಯಾಲಿಯ ಮುಕ್ತಾಯ ಸಮಾರಂಭ ನೆರವೇರಿತು



ಡಾ. ಕೆ.ವಿ. ಗುರುಮೂರ್ತಿ, ಶ್ರೀ ಅಬ್ದುಲ್ ಜಮೀಲ್, ಶ್ರೀಮತಿ ಲೀಲಾ ಗುರುಮೂರ್ತಿ, ಶ್ರೀಮತಿ ಎಸ್. ಸುಜಯ, ಶ್ರೀಮತಿ ಮನೋಹರ ಪ್ರಭ, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಮತಿ ಸರಸ್ವತಿ ಸುರೇಶ್, ಕಬ್ ವಿಭಾಗಕ್ಕೆ, ಶ್ರೀಮತಿ ಕುಸುಮ, ಬುಲ್‌ಬುಲ್ ವಿಭಾಗಕ್ಕೆ, ಶ್ರೀ ರಾಘವೇಂದ್ರ ರೋವರ್ ವಿಭಾಗಕ್ಕೆ, ಶ್ರೀಮತಿ ಸುಜಯ ರೇಂಜರ್ ವಿಭಾಗಕ್ಕೆ, ಶ್ರೀಮತಿ ಉಮಾಮಣಿ ಗೈಡ್ ವಿಭಾಗಕ್ಕೆ ಹಾಗೂ ಶ್ರೀ ಶಶಿಧರ್, ಸ್ಕೌಟ್ ವಿಭಾಗಕ್ಕೆ ನಾಯಕರುಗಳಾಗಿ ಕಾರ್ಯನಿರ್ವಹಿಸಿದರು. ಶ್ರೀ ಅಮರನಾಥ್‌ರವರು ರ್‍ಯಾಲಿಯ ಎಲ್ಲಾ ಕಾರ್ಯಕ್ರಮಗಳ ನಿರೂಪಣೆಯನ್ನು ಮಾಡಿದರು.

* ಜನವರಿ 10 ರಂದು ಮೈಸೂರು ಜಿಲ್ಲಾ ಸಂಸ್ಥೆಯ ವಾರ್ಷಿಕ ಪರಿಷತ್ ಸಭೆ ನಡೆಯಿತು. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾದ ಡಾ. ಕೆ.ವಿ. ರಾಜೇಂದ್ರ ಐ.ಎ.ಎಸ್.ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಭೆಯಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ರಾಮಚಂದ್ರ ರಾಜೇ ಅರಸ್ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು, ಡಾ. ಜಿ. ಸಿದ್ದೇಶ್, ಶ್ರೀಮತಿ ರಾಜಶ್ರೀ, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಖಜಾಂಚಿಗಳಾದ ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಅಬ್ದುಲ್ ಜಮೀಲ್ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳುರವರು ಭಾಗವಹಿಸಿದ್ದರು.

* ಜನವರಿ 12 ರಂದು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಶ್ರೀ ವಿವೇಕಾನಂದ ಜಯಂತಿ ಆಚರಿಸಲಾಯಿತು. ಶ್ರೀ ಯುಕ್ತೇಶಾನಂದ ಕರೆಸ್ಪಾಂಡೆಂಟ್, ರಾಮಕೃಷ್ಣ ವಿದ್ಯಾ ಶಾಲಾ, ಮೈಸೂರುರವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ವಿವೇಕಾನಂದರ ಚಿತ್ರಪಟಕ್ಕೆ ಪುಷ್ಪಾರ್ಚನೆ ಮೂಡುವ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯಿತು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು ಸ್ವಾಗತ ಕೋರಿದರು. ಶ್ರೀ ಟಿ.ಎಸ್. ರವಿಶಂಕರ್, ಜಿಲ್ಲಾ ಸ್ಕೌಟ್ ಆಯುಕ್ತರು ವಂದನಾರ್ಪಣೆ ಮಾಡಿದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ಜಿಲ್ಲಾ ಸಮಿತಿಯ ಸದಸ್ಯರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* ಜನವರಿ 17 ರಂದು ಜಿಲ್ಲಾ ಸಂಸ್ಥೆಯ ವೃಕ್ಷಮಣಿ ಧಾರಕಾರ ಸಭೆಯನ್ನು ಏರ್ಪಡಿಸಲಾಗಿತ್ತು. ಜಿಲ್ಲಾ ಸಂಸ್ಥೆಯ 30 ವೃಕ್ಷಮಣಿ ಧಾರಕರು ಈ ಸಭೆಯಲ್ಲಿ ಭಾಗವಹಿಸಿದ್ದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಾಂಚಿಗಳು, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಸುಜಯ, ಶ್ರೀಮತಿ ಮನೋಹರ ಪ್ರಭ, ಜಿಲ್ಲಾ ತರಬೇತಿ ಆಯುಕ್ತರು ಗೈಡ್, ಜಿಲ್ಲಾ ಸಂಘಟಕರುಗಳಾದ ಶ್ರೀ ರಾಮಪ್ರಸಾದ್, ಶ್ರೀ ಆರ್.ಪಿ. ಚಂದ್ರು ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ದಿನಾಂಕ 3 ಮತ್ತು 4 ಫೆಬ್ರವರಿ 2023 ರಂದು ನಡೆಯಲಿರುವ ಜಿಲ್ಲಾ ಸಂಸ್ಥೆಯ ರ್‍ಯಾಲಿಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

## ರಾಯಚೂರು

ಜನವರಿ 26 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ 74ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಜಿಲ್ಲಾ ಸ್ಕೌಟ್ ಭವನ, ರಾಯಚೂರು ಇಲ್ಲಿ ಆಚರಣೆ ಮಾಡಲಾಯಿತು. ಶ್ರೀ ಬಸವರಾಜ ಗದಗಿನ, ಜಿಲ್ಲಾ ಕಾರ್ಯರ್ಶಿಗಳು ರವರು ಧ್ವಜಾರೋಹಣ ಕಾರ್ಯಕ್ರಮವನ್ನು ನೇರವೇರಿಸಿದರು. ಇದೇ ಸಂರ್ಭದಲ್ಲಿ ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ, ಶ್ರೀ ವೈ. ನರಸಿಂಹ RSL ಹಾಗೂ ವಿದ್ಯಾ ಜ್ಯೋತಿ ಶಾಲೆ ರಾಯಚೂರು, ಸ.ಪ್ರೌ.ಶಾಲೆ ಕೆ.ಇ.ಬಿ ಶಾಲೆಯ ಮಕ್ಕಳು, ಮುಖ್ಯ ಗುರುಗಳು ಶ್ರೀಮತಿ ಜಯಶ್ರೀ, ಶ್ರೀಮತಿ ಜಮುನಾ, ಕಬ್ಸ್, ಬುಲ್-ಬುಲ್ಸ್ ಸ್ಕೌಟ್ಸ್-ಗೈಡ್ಸ್ ಮಕ್ಕಳು ಉಪಸ್ಥಿತರಿದ್ದರು.



* ಜನವರಿ 26 ರಂದು ಜಿಲ್ಲಾಡಳಿತ ರಾಯಚೂರು ವತಿಯಿಂದ 74ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಮಹಾತ್ಮ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜನೆ ಮಾಡಲಾಯಿತು. ಸನ್ಮಾನ್ಯ ಶ್ರೀ ಶಂಕರ ಬ. ಪಾಟೀಲ್ ಮುನೇಕಪ್ಪ ಕೈಮಗ್ಗ ಮತ್ತು ಜವಳಿ ಇಲಾಖೆ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು, ಕರ್ನಾಟಕ ಸರ್ಕಾರ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿ ವಿಧಾನ ಸಭೆಯ ಸಭಾಪತಿರವರು ಆಗಮಿಸಿದ್ದರು. ಹಾಗೂ ಪಥಸಂಚಲನ ಕಾರ್ಯಕ್ರಮವನ್ನು ಸಹ ಆಯೋಜನೆ ಮಾಡಲಾಯಿತು. ಈ ಪಥ ಸಂಚಲನದಲ್ಲಿ ಸ.ಪ್ರೌ. ಶಾಲೆ ಜಹಿರಾಬಾದ್ ತಾ.: ರಾಯಚೂರು ಗೈಡ್ಸ್ ಮಕ್ಕಳು ಪ್ರಥಮ ಸ್ಥಾನವನ್ನು ಪಡೆದರು. ಈ ಮಕ್ಕಳಿಗೆ ಮಾನ್ಯ ಸಚಿವರು ಬಹುಮಾನವನ್ನು ವಿತರಿಸಿದರು. ಮತ್ತು ಸೇಂಟ್ ಮೇರಿ ಕಾನ್ವೆಂಟ್ ಶಾಲೆ ರಾಯಚೂರು ಗೈಡ್ಸ್ ಮಕ್ಕಳು, ಸ.ಹಿ.ಪ್ರಾ.ಶಾಲೆ ಪೊಲೀಸ್ ಕಾಲೋನಿ ರಾಯಚೂರು ಗೈಡ್ಸ್ ಮಕ್ಕಳು ಸಮಾಧಾನಕರ ಬಹುಮಾನ ಪಡೆದರು.

* ಫೆಬ್ರವರಿ 14 ರಂದು ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ವಿಶ್ವ ಸಾಂಸ್ಕೃತಿಕ ಜಾಂಬೂರಿಯ ಯಶಸ್ಸಿನ ಅಭಿನಂದನಾ ಸಮಾರಂಭವನ್ನು ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರುರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸ್ಕೌಟ್ ಭವನ, ರಾಯಚೂರು ಇಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಆಯುಕ್ತರು (ಸ್ಕೌ) ರವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಬಸವರಾಜ ಗದಗಿನ, ಜಿಲ್ಲಾ ಕಾರ್ಯದರ್ಶಿಗಳು ಅವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಶ್ರೀಮತಿ



ಲಲಿತಾ ಆಂಜನೇಯ ಕಡಗೋಲ್, ಅಧ್ಯಕ್ಷರು ನಗರ ಸಭೆ ರಾಯಚೂರುರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮಾನ್ಯ ಶ್ರೀ ವೃಷಬೇಂದ್ರಯ್ಯ ಸ್ವಾಮಿ, ಉಪನಿರ್ದೇಶಕರು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ರಾಯಚೂರು, ಡಾ: ಸುರೇಶ್ ಸಗರದ್ ರಾಯಚೂರು, ಶ್ರೀಮತಿ ಅಜೀಜಾ ಸುಲ್ತಾನಾ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು ರೋವರ್ಸ್, ರೇಜರ್ಸ್‌ರವರು ಭಾಗವಹಿಸಿದ್ದರು. ಶ್ರೀಮತಿ ಬಿ.ಎನ್. ಮನುಕುಮಾರಿ ಗೈಡ್ ಕ್ಯಾಪ್ಟನ್‌ರವರು ನಿರೂಪಿಸಿದರು.

## ರಾಮನಗರ

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಸಂಗಯ್ಯ ಮಠಪತಿರವರು ತಮ್ಮ ಶಾಲೆಯಲ್ಲಿ ಫೆಬ್ರವರಿ 09 ರಂದು ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಮಕ್ಕಳ ಹಬ್ಬ ಕಾರ್ಯಕ್ರಮ ಅಂಗವಾಗಿ ಕ್ರಾಫ್ಟ್ ವರ್ಕ್ ಚಟುವಟಿಕೆಯನ್ನು ಆಯೋದಿಜಿಸಿದ್ದರು. ಈ ಸಂದರ್ಭದಲ್ಲಿ ಶಾಲೆ. ಮುಖ್ಯ ಶಿಕ್ಷಕರು ಮತ್ತು ಸಹಶಿಕ್ಷಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಕೋಡಿಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರು ಹಾಜರಿದ್ದರು.

* ಪ್ರಗತಿ ವಿದ್ಯಾನಿಕೇತನ ಶಾಲೆ ಹಾರೋಹಳ್ಳಿ ತಾ॥, ರಾಮನಗರ ಜಿಲ್ಲೆ. ಈ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಕಬ್ಸ್ ಬುಲ್ ಬುಲ್ಸ್, ಸ್ಕೌಟ್ಸ್-ಗೈಡ್ಸ್, ಸ್ಕೌಟರ್ಸ್-ಗೈಡರ್ಸ್, ಪೋಷಕರು ಹಾಗು ಶಿಕ್ಷಕರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನೂತನ ತಾಲ್ಲೂಕಿನ ತಹಸಿಲ್ದಾರ್ ಶ್ರೀ ವಿಜಯಣ್ಣನವರು ಆಗಮಿಸಿ ಸ್ಕೌಟ್-ಗೈಡ್‌ಗಳಿಗೆ ಪೋಷಕರಿಗೆ ಮತ್ತು ಶಿಕ್ಷಕರಿಗೆ ಶಿಸ್ತು, ಸಹಬಾಳ್ವೆಯ ಬಗ್ಗೆ , ಪೋಷಕರು ಸಹಕರಿಸುವ ಬಗ್ಗೆ, ಗುರು ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ಪ್ರೀತಿ ಬೆಸುಗೆಯ ಬಗ್ಗೆ ಪ್ರಸ್ತಾಪಿಸುವ ಮೂಲಕ ಸ್ಕೌಟ್-ಗೈಡನ್ನು





ಬೆಳೆಸಬೇಕೆಂದು ಕರೆ ನೀಡಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಶಿವನಂಜಪ್ಪ, ಮುಖ್ಯ ಶಿಕ್ಷಕಿ ಶ್ರೀಮತಿ ಕೆ.ಎಂ. ರೇಖಾ, ಶಾಲಾ ಸ್ಕೌಟರ್ ಗೈಡರ್‌ಗಳು ರೆವಿನ್ಯು ಇನ್ಸ್‌ಫೆಕ್ಟರ್ ಶ್ರೀ ಬಸವಣ್ಣನವರು ಭಾಗವಹಿಸಿದ್ದರು. ಮುಖ್ಯ ರಸ್ತೆಯಲ್ಲಿ ಜಾಥದ ಮೂಲಕ ಸಾರ್ವಜನಕರಲ್ಲಿ ಸ್ವಚ್ಚತೆ, ಪರಿಸರ ಸಂರಕ್ಷಣೆ ಇತ್ಯಾದಿ ಫ್ಲೆಕ್ಷ ಜೊತೆಯಲ್ಲಿ ಘೋಷಣೆಯ ಮೂಲಕ ಮನವರಿಕೆ ಮಾಡಿಕೊಟ್ಟರು. ಶಾಲೆಯಲ್ಲಿ ಕಬ್ಸ್ ಗ್ರೀಟಿಂಗ್, ಬುಲ್ ಬುಲ್ಸ್ ಗ್ರೀಟಿಂಗ್ ಮತ್ತು ಫ್ಲಾಗ್ ಪರೇಡ್ ನೊಂದಿಗೆ ಕಾರ್ಯಕ್ರಮವನ್ನು ಪ್ರಾರಂಬಿಸಲಾಯಿತು. ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಇಡೀ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಶಿವಮೊಗ್ಗ

ಜಿಲ್ಲಾ ಸಂಸ್ಥೆಯ ವತಿಯಿಂದ 74ನೇ ಗಣರಾಜ್ಯೋತ್ಸವವನ್ನು ಜಿಲ್ಲಾ ಸ್ಕೌಟ್ ಭವನ ಶಿವಮೊಗ್ಗದಲ್ಲಿ ಆಚರಿಸಲಾಯಿತು. ವಿವಿಧ ಶಾಲೆ, ಕಾಲೇಜಿನ ಕಬ್, ಬುಲ್‌ಬುಲ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶ ಶಾಸ್ತ್ರಿ ರವರು ಧ್ವಜಾರೋಹಣ ನೆರೆವೇರಿಸಿದರು.

ನಂತರದಲ್ಲಿ ಬಾಬಾ ಸಾಹೇಬ್ ಡಾ|| ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಗಣರಾಜ್ಯೋತ್ಸವದ ಮಹತ್ವವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿ ರವರು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳು ಉಪಸ್ಥಿತರಿದ್ದರು.



* ಜನವರಿ 23 ರಂದು ಜಿಲ್ಲಾ ಸ್ಕೌಟ್ ಭವನ ಶಿವಮೊಗ್ಗದಲ್ಲಿ ನೇತಾಜಿ ಸುಭಾಸ್‌ಚಂದ್ರ ಬೋಸ್‌ರವರ 126ನೇ ಜಯಂತಿಯನ್ನು ಆಚರಣೆ ಮಾಡಲಾಯಿತು. ಆಜಾದ್ ಹಿಂದ್ ಫೌಜ್ (INA) ರಚನೆಯ ಹರಿಕಾರ ನೇತಾಜಿ ಸುಭಾಸ್‌ಚಂದ್ರ ಬೋಸ್‌ರವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಅರ್ಪಿಸುವುದರ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರರವರು ಮಾತನಾಡುತ್ತಾ "ಭಾರತದ ಅತ್ಯಂತ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರಲ್ಲಿ ನೇತಾಜಿಯುವರು ಒಬ್ಬರಾಗಿದ್ದರು. ಅವರು ಯುವಕರ ವರ್ಚಸ್ವಿ ಪ್ರಭಾವಶಾಲಿಯಾಗಿದ್ದರು ಮತ್ತು ಸ್ವಾತಂತ್ರ್ಯ-ಹೋರಾಟದ ಸಮಯದಲ್ಲಿ ಭಾರತೀಯ ರಾಷ್ಟ್ರೀಯ ಸೇನೆಯನ್ನು ಸ್ಥಾಪಿಸಿ ಮುನ್ನಡೆಸುವ ಮೂಲಕ 'ನೇತಾಜಿ' ಎಂಬ ಬಿರುದನ್ನು ಪಡೆದರು. ಅವರಂತೆ ರಾಷ್ಟ್ರರಕ್ಷಣೆ ನಮ್ಮೆಲ್ಲರ ಕರ್ತವ್ಯ ಅವರ ವಿಭಿನ್ನ ಸಿದ್ಧಾಂತಗಳನ್ನು ನಾವು ಸಹ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದುಕರೆ ನೀಡಿದರು. ನೇತಾಜಿ ಸುಭಾಸ್‌ಚಂದ್ರ ಬೋಸ್‌ರವರ ಜೀವನ ಚರಿತ್ರೆಯನ್ನು ಮಕ್ಕಳಿಗೆ ಸವಿಸ್ತಾರವಾಗಿ ಎಲ್.ಎ. ಕಾರ್ಯದರ್ಶಿ ಶ್ರೀ ಎ.ವಿ. ರಾಜೇಶರವರು ತಿಳಿಸಿಕೊಟ್ಟರು. ಸ್ವಾಗತವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ ರವರು ನೇರವೇರಿಸಿದರು, ಕಾರ್ಯಕ್ರಮದ ನಿರೂಪಣೆಯನ್ನು ಎ.ಎಸ್.ಒ.ಸಿ ಶ್ರೀಮತಿ ಭಾರತಿ ಡಾಯಸ್‌ರವರು ನಿರ್ವಹಿಸಿದರು, ವಂದನೆಯನ್ನು ಎ.ಎಲ್.ಟಿ. ಶ್ರೀ ಹೆಚ್. ಶಿವಶಂಕರ್ ರವರು ನೇರವೇರಿಸಿದರು.



## ಅಭಿನಂದನೆಗಳು



ಕರ್ನಾಟಕ ಸರ್ಕಾರಿ ಗ್ರಾಮೀಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ರಾಜ್ಯ ಘಟಕ ಇವರು ನೀಡುವ
ರಾಜ್ಯ ಮಟ್ಟದ ಗ್ರಾಮೀಣ ಶಿಕ್ಷಕ ರತ್ನ'– ಪ್ರಶಸ್ತಿ
ಶ್ರೀಮತಿ ವಾಮನ ಟಿ.ಕೆ.,
ಬಿ.ಆರ್.ಪಿ (ವಿರಾಜಪೇಟೆ) ಇವರಿಗೆ ಲಭಿಸಿದೆ.
ಇವರು ಕಬ್ ವಿಭಾಗದಲ್ಲಿ Pre -ALT ಆಗಿರುತ್ತಾರೆ

## ವಿಜಯಪುರ

ಜಿಲ್ಲಾ ಸಂಸ್ಥೆ ವಿಜಯಪುರ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆ ಹಳಗುಣಕಿ ಇವರ ಸಹಯೋಗದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಇಂಡಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಡಾ. ಮಂಜುನಾಥ ಕೋಟೆಣ್ಣವರ ರವರು ಮಾತನಾಡಿ ಸದೃಢ ಭಾರತ ನಿರ್ಮಾಣಕ್ಕೆ ಸ್ಕೌಟ್ಸ್-ಗೈಡ್ಸ್ ಸಹಕಾರಿಯಾಗಿದೆ ಎಂದು ಹೇಳಿದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ ಹಾಗೂ ಶಾಲೆಯ ಶಿಕ್ಷಕ ವೃಂದ ಮತ್ತು ಎಸ್.ಡಿ.ಎಮ್.ಸಿ ಪದಾಧಿಕಾರಿಗಳು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



* ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ) ಹಾಗೂ ನಿಡಗುಂದಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಎಸ್.ಬಿ. ಭಜಂತ್ರಿ ಇವರ ನೇತೃತ್ವದಲ್ಲಿ ಬಿ.ಎಮ್.ಎನ್.ಪಿ. ಶಾಲೆ, ಆಲಮಟ್ಟಿ ಶಾಲೆಯಲ್ಲಿ ಸಂಸ್ಥಾಪಕ ದಿನಾಚರಣೆಯನ್ನು ಆಚರಿಸಲಾಯಿತು. ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಶಾಲಾ ಶಿಕ್ಷಕವೃಂದ ಹಾಜರಿದ್ದರು. ನಂತರ ಸ್ವಚ್ಛತಾ ಕಾರ್ಯಕ್ರಮವನ್ನು ಮಾಡಲಾಯಿತು.








ಇತ್ತೀಚೆಗೆ ಬಜೆಟ್ ಮಂಡಿಸಿದ ಮುಖ್ಯ ಮಂತ್ರಿಗಳು ಮಕ್ಕಳಿಗಾಗಿ "ವಾತ್ಸಲ್ಯ" ಯೋಜನೆಗೆ ರೂ.3,143 ಕೋಟಿ ರೂಪಾಯಿ ಒದಗಿಸಿದ್ದಾರೆ. ಇದು ಮಕ್ಕಳನ್ನು ರಕ್ಷಿಸಲು, ಸರ್ವಾಂಗೀಣ ಮಕ್ಕಳ ಅಭಿವೃದ್ಧಿಗಾಗಿ ಮಾಡಿದ ನಿರ್ಧಾರ. ಇದು ಕೇಂದ್ರ ಸರಕಾರದ **"Mission Vatsalya"**ವನ್ನು ನಮ್ಮ ಕರ್ನಾಟಕದ ಮಕ್ಕಳ ಅಭಿವೃದ್ಧಿಗಾಗಿ ಬಳಸಿ ನಮ್ಮ ಮಕ್ಕಳಿಗೆ ಉತ್ತಮ ಭದ್ರಭವಿಷ್ಯ ಕಲ್ಪಿಸಲು ಇಟ್ಟ ದಿಟ್ಟ ಹೆಜ್ಜೆಯಾಗಿದೆ. ನಮ್ಮ ಮಕ್ಕಳು ಭವ್ಯ ಭಾರತದ ಭವಿಷ್ಯವೆಂದು ಅರಿತು ಇಂದು ನಾವು ಮಕ್ಕಳನ್ನು ರಕ್ಷಿಸಿ, ಪೋಷಿಸಿದರೆ ಮುಂದೆ ಅವರು ದೇಶದ ಭವಿಷ್ಯವನ್ನು ಕಟ್ಟುತ್ತಾರೆ ಎಂಬ ನಂಬಿಕೆಯಿಂದ ಮಕ್ಕಳಿಗೆ ವಿದ್ಯೆ ಕೊಟ್ಟಿದ್ದರಿಂದ ಇಂದು ವಿಶ್ವದ 58 ಪ್ರಮುಖ ಕಂಪನಿಗಳನ್ನು ಭಾರತದ ಮೂಲದ ವ್ಯಕ್ತಿಗಳು ಸಿಇಒ ಆಗಿ ಜಗತ್ತನ್ನು ಆಳುತ್ತಿದ್ದಾರೆ. ಇವರು ನಮ್ಮ ಮಕ್ಕಳಿಗೆ ಆದರ್ಶವಾಗಬೇಕು. ಉದಾಹರಣೆಗೆ ಈಗಾಗಲೆ ಸತ್ಯಂ, ಶಿವಂ, ಸುಂದರಂ ಎಂದು ಪ್ರಖ್ಯಾತರಾದ ಸತ್ಯ ನಡೆಲ್ಲಾ, **Microsoft, Google and Alphabet INc** ನ ಸುಂದರ ಪಿಚ್ಚೈ, **Twitter** ನ ಪರಾಗ ಅಗರವಾಲ, **Abode System**ನ ಶಾಂತನು ನಾರಾಯಣ, **Channel**ನ ಲೀನಾ ನಾಯರ್, **IBM**ನ ಅರವಿಂದ ಕೃಷ್ಣ, **Master Card**ನ ಅಜಯಪಾಲ ಸಿಂಗ್ ಬಂಗಾ, **Arista Networks**ನ ಜಯಶ್ರೀ ಉಲ್ಲಾಳ, **Infosys** ನ ಪಲೀಲ ಪಾರೇಖ, **Pepsico**ದ ಇಂದಿರಾ ನೂಯಿ, **Vimeo**ದ ಅಂಜಲಿ ಸೂದ್, **Flex**ದ ರೇವತಿ ಅದ್ವೈತಿ ಹೇಳುತ್ತಾರೆ " ನಾವು ಜನರನ್ನು ಅಪ್ಪಿಕೊಂಡು ಅವರೊಂದಿಗೆ ಬೆರೆತು ಜೊತೆಗೆ ಸೇರಿ ಕೆಲಸ ಮಾಡಿದರೆ ಯಶಸ್ಸು ಸಿಗುವುದು" ಆದ್ದರಿಂದ ನಮ್ಮ ಮಕ್ಕಳಿಗೆ ಉತ್ತಮ ವಿದ್ಯೆ ಕೊಟ್ಟು, ಅವರ ಆರೋಗ್ಯ ಕಾಪಾಡಿ ಅವರನ್ನು ದುರಭ್ಯಾಸಗಳಿಂದ ರಕ್ಷಿಸಿ, ಅವರು ನಮ್ಮ ಭಾರತ ವಿಶ್ವಗುರುವಾಗಲು ಶ್ರದ್ಧೆಯಿಂದ ಶ್ರಮಿಸುವ ವ್ಯಕ್ತಿಯಾಗುವಂತೆ ಮಾಡಬೇಕು



**ಶ್ರೀ ಎಸ್.ಎಸ್. ನಿಂಬಾಳ,** ಎ.ಎಲ್.ಟಿ.(ಎಸ್) ಮಾಜಿ ಜಿಲ್ಲಾ ಕಾರ್ಯದರ್ಶಿ, ಭಾರತ್ ಸ್ಕೌಟ್ ಮತ್ತು ಗೈಡ್ಸ್ ವಿಜಯಪುರ ಜಿಲ್ಲೆ ಇವರು ಫೆಬ್ರವರಿ 04, 2023 ರಂದು ವಿಜಯಪುರದಲ್ಲಿ ನಿಧನರಾದರು. ಇವರಿಗೆ 81 ವರ್ಷ ವಯಸ್ಸಾಗಿತ್ತು. ಇವರು ಸ್ಕೌಟ್ ಮಾಸ್ಟರ್ ಆಗಿ ಡಿ.ಓ.ಸಿ. ಆಗಿ, ನಂತರ ಜಿಲ್ಲಾ ಕಾರ್ಯದರ್ಶಿಯಾಗಿ ಹಲವಾರು ವರ್ಷಗಳ ಕಾಲ ಬಿಜಾಪುರ ಜಿಲ್ಲೆಯಲ್ಲಿ ಸ್ಕೌಟ್-ಗೈಡ್ ಚಳವಳಿ ಹೆಚ್ಚಿಸಲು ಕಾರ್ಯನಿರ್ವಹಿಸಿದ್ದರು. ಸ್ಕೌಟ್ ವಿಭಾಗದಲ್ಲಿ ಎ.ಎಲ್.ಟಿ. ತರಬೇತಿಯನ್ನು ಪಡೆದಿದ್ದು, ರಾಜ್ಯ ಸಂಸ್ಥೆ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರು. ರಾಷ್ಟ್ರೀಯ ಸಂಸ್ಥೆಯಿಂದ 2007ರಲ್ಲಿ ಅಂದಿನ ಗೌರವಾನ್ವಿತ ರಾಷ್ಟ್ರಪತಿಗಳಾಗಿದ್ದ ಡಾ. ಎ.ಪಿ.ಜೆ. ಕಲಾಂ ಅವರಿಂದ "ಸಿಲ್ವರ್ ಸ್ಟಾರ್" ಪ್ರಶಸ್ತಿಯನ್ನು ಸಹ ಪಡೆದಿದ್ದರು.



**ಶ್ರೀ ಕೆ.ಎನ್. ಆಿಗಡಿ,** ಹಿರಿಯ ಸ್ಕೌಟ್ ಮಾಸ್ಟರ್ ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ ಇವರು ಫೆಬ್ರವರಿ 03 ರಂದು ಅಂಕೋಲದಲ್ಲಿ ನಿಧನರಾದರು. ಇವರಿಗೆ 83 ವರ್ಷ ವಯಸ್ಸಾಗಿತ್ತು. ಸ್ಕೌಟ್ ವಿಭಾಗದಲ್ಲಿ ಹೆಚ್.ಡಬ್ಲ್ಯೂ.ಬಿ. ತರಬೇತಿಯನ್ನು ಪಡೆದಿದ್ದು ಹಲವಾರು ವರ್ಷಗಳಿಂದ ಸ್ಕೌಟ್ ಶಿಕ್ಷಕರಾಗಿ ದಾಂಡೇಲಿಯ ಜನತಾ ವಿದ್ಯಾಲಯದಲ್ಲಿ ದೀರ್ಘಾವಧಿ ಸೇವೆ ಸಲ್ಲಿಸಿರುತ್ತಾರೆ. ತಮ್ಮ ನಿವೃತ್ತಿ ಜೀವನದಲ್ಲಿ ಸಹ ಸ್ಕೌಟಿಂಗ್‌ನಲ್ಲಿ ಕ್ರಿಯಾಶೀಲರಾಗಿದ್ದು ಇವರದೇ ಆದ ಶ್ರೀ ಪರಿಜ್ಞಾನ ಆಶ್ರಮ ಸಂಸ್ಥೆಯ ಸಂಸ್ಥಾಪಕರಾಗಿದ್ದರು. ಸ್ಕೌಟಿಂಗ್‌ನಲ್ಲಿ ಕ್ರಿಯಾಶೀಲರಾಗಿದ್ದ ಇವರು ಸಾಕಷ್ಟು ಮಕ್ಕಳಿಗೆ ರಾಜ್ಯಪುರಸ್ಕಾರ ಮತ್ತು ರಾಷ್ಟ್ರಪತಿ ಪುರಸ್ಕಾರ ಪ್ರಶಸ್ತಿಗಳನ್ನು ಪಡೆಯಲು ಕಾರಣರಾಗಿದ್ದರು.



ಅವಿಭಾಜ್ಯ ಬೆಂಗಳೂರು ಗ್ರಾಮಾಂತರ ಜಿಲ್ಲೆ (ಈಗಿನ ರಾಮನಗರ ಜಿಲ್ಲೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಆನೇಕಲ್ ತಾಲ್ಲೂಕು)ನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ 20 ವರ್ಷಗಳು ಖಜಾಂಚಿಯಾಗಿ, ಹಾರೋಹಳ್ಳಿ ಗ್ರಾಮಾಂತರ ಪ್ರೌಢಶಾಲೆಯಲ್ಲಿ 35 ವರ್ಷಗಳು ಶಿಕ್ಷಕರಾಗಿ ಸ್ಕೌಟರ್‌ರಾಗಿ ಉತ್ತಮ ತರಬೇತಿ ನಾಯಕರಾಗಿ ಸಂಸ್ಥೆಯಲ್ಲಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿದ **ಶ್ರೀ ಗೋಪಾಲಕೃಷ್ಣ ಹೊಳ್ಳ** ಅವರು ಫೆಬ್ರವರಿ 22, 2023 ರಂದು ಬೆಂಗಳೂರಿನಲ್ಲಿ ನಿಧನರಾದರು ಅವರಿಗೆ 82 ವರ್ಷ ವಯಸ್ಸಾಗಿತ್ತು. ನಿವೃತ್ತಿ ನಂತರವೂ ಹಲವಾರು ವರ್ಷಗಳ ಸ್ಕೌಟ್ ತರಬೇತಿಗಳಲ್ಲಿ ನಾಯಕರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶಿಕ್ಷಣ ಕ್ಷೇತ್ರದಲ್ಲಿ ಕೂಡ ಅಪಾರ ಜ್ಞಾನವನ್ನು ಹೊಂದಿದ್ದ ಶ್ರೀಯುತರು ಅನೇಕ ಕಾರ್ಯಗಾರಗಳಲ್ಲಿ ಸೆಮಿನಾರ್‌ಗಳಲ್ಲಿ ಎಸ್.ಎಸ್.ಎಲ್.ಸಿ. ಪ್ರಶ್ನೆಪತ್ರಿಕೆ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಶಂಸೆಗೆ ಪಾತ್ರರಾಗಿದ್ದರು. ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ (ಅವಿಭಾಜ್ಯ) ಸ್ಕೌಟ್ಸ್ ಮತ್ತು ಗೈಡ್ಸ್ ಪುರೋಭಿವೃದ್ಧಿಗೆ ಕಾರಣೀಭೂತರಾಗಿ. ರಾಜ್ಯ, ರಾಷ್ಟ್ರ ಮಟ್ಟದ ಅನೇಕ ತರಬೇತಿಗಳಲ್ಲಿ ಸಹಾಯಕರಾಗಿ, ನಾಯಕರಾಗಿ, ಜಿಲ್ಲಾ ಮಟ್ಟ, ರಾಜ್ಯ ಮಟ್ಟದ ಜಾಂಬೊರೇಟ್, ರಾಷ್ಟ್ರೀಯ ಜಾಂಬೋರಿಗಳಲ್ಲಿ ಅಪಾರ ಸೇವೆಸಲ್ಲಿಸಿ ಮೆಚ್ಚುಗೆಗೆ ಪಾತ್ರರಾಗಿದ್ದರು. ಇವರು ಧರ್ಮಪತ್ನಿ, ಒಬ್ಬ ಮಗ ಮತ್ತು ಒಬ್ಬ ಮಗಳನ್ನು ಅಗಲಿದ್ದಾರೆ.



ರಾಜ್ಯ ಸಂಘಟನಾ ಸ್ಕೌಟ್ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್ ಅವರ ಮಾತೃಶ್ರೀಯವರಾದ **ಶ್ರೀಮತಿ ಶಾರದಮ್ಮರವರು** ಫೆಬ್ರವರಿ 11, 2023 ರಂದು ದಕ್ಷಿಣ ಕನ್ನಡ ಜಿಲ್ಲೆ ಭಂಟ್ವಾಳದಲ್ಲಿ ನಿಧನರಾದರು. ಇವರಿಗೆ 91 ವರ್ಷ ವಯಸ್ಸಾಗಿತ್ತು. ಇವರು 5 ಗಂಡು ಮಕ್ಕಳು ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

# ಶ್ರದ್ಧಾಂಜಲಿ



**ಶ್ರೀಮತಿ ಡಿ.ಎಂ. ಗಿರಿಜಮ್ಮ ರುದ್ರಯ್ಯ,** ಮಾಜಿ ಜಿಲ್ಲಾ ಗೈಡ್ಸ್ ಆಯುಕ್ತರು, ಚಿತ್ರದುರ್ಗ ಜಿಲ್ಲಾ ಸಂಸ್ಥೆ ಹಾಗೂ ರಾಜ್ಯ ಸಂಸ್ಥೆ ಆಜೀವ ಸದಸ್ಯರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಇವರು ಫೆಬ್ರವರಿ 20, 2023 ರಂದು ಚಿತ್ರದುರ್ಗದಲ್ಲಿ ನಿಧನರಾದರು. ಇವರಿಗೆ 97 ವರ್ಷ ವಯಸ್ಸಾಗಿತ್ತು. ಇವರು ಚಿತ್ರದುರ್ಗ ಜಿಲ್ಲಾ ಸಂಸ್ಥೆಯಲ್ಲಿ ಹಲವಾರು ವರ್ಷಗಳ ಕಾಲ ಗೈಡ್ಸ್ ಆಯುಕ್ತರಾಗಿ ಕಾರ್ಯನಿರ್ವಹಿಸಿದ್ದರು. ಅಲ್ಲದೆ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳಲ್ಲಿ ಸಹ ಸಮಾಜ ಸೇವಕರಾಗಿ ಸೇವೆ ಸಲ್ಲಿಸಿದ್ದರು. “ಗ್ರಾಮ” ಎಂಬ ಸಂಸ್ಥೆಯ ಸ್ಥಾಪಕ ಅಧ್ಯಕ್ಷಣಿಯಾಗಿ ಕಳೆದ ನಾಲ್ಕು ದಶಕಗಳಿಂದ ಹಳ್ಳಿಗಾಡಿನ ಮಹಿಳೆಯರ ಶ್ರೇಯೋಭಿವೃದ್ದಿಗೆ ಶ್ರಮಿಸಿರುತ್ತಾರೆ. ಇವರು 3 ಜನ ಗಂಡು ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುತ್ತಾರೆ.



**ಪ್ರೊ. ಶಿವಬಸಪ್ಪ,** ಅಜೀವ ಸದಸ್ಯರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಇವರು ಫೆಬ್ರವರಿ 15, 2023 ರಂದು ಬೆಂಗಳೂರಿನಲ್ಲಿ ನಿಧನರಾದರು., ಇವರಿಗೆ 85 ವರ್ಷ ವಯಸ್ಸಾಗಿತ್ತು. ಇವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಡೆಪ್ಯೂಟಿ ರಿಜಿಸ್ಟ್ರಾರ್ ಆಗಿ ನಿವೃತಿ ಹೊಂದಿದ್ದರು. ಇವರು ಬಸವ ಸಮಿತಿಯ ರಾಜ್ಯ ಪರಿಷತ್ ಸದಸ್ಯರಾಗಿದ್ದರು. ಇವರು ಇತ್ತೀಚೆಗಷ್ಟೆ ರಾಜ್ಯ ಸಂಸ್ಥೆ ಯ ಆಜೀವ ಸದಸ್ಯರುಗಳಿಂದ ರಾಜ್ಯ ಪರಿಷತ್‌ಗೆ ಆಯ್ಕೆಯಾಗಿದ್ದರು. ಇವರು ತಮ್ಮ ಧರ್ಮಪತ್ನಿ ಮತ್ತು ಮಗಳನ್ನು ಅಗಲಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಕೆ.ಎಸ್. ಪ್ರತೀಮ್ ಕುಮಾರ್, ಎಲ್‌ಟಿ(ಸ್ಕೌಟ್) ಇವರ ತಂದೆ **ಶ್ರೀ ದುಗ್ಗಪ್ಪರವರು** ಫೆಬ್ರವರಿ 21ರಂದು ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕು ಬಿ.ಸಿ. ರೋಡ್‌ನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 87 ವರ್ಷ ವಯಸ್ಸಾಗಿತ್ತು. ಶ್ರೀಯುತರು ಆರೋಗ್ಯ ಇಲಾಖೆಯಲ್ಲಿ ಮಲೇರಿಯಾ ವಿಭಾಗದ ಹಿರಿಯ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು. ಇವರು ಧರ್ಮಪತ್ನಿ ಒಬ್ಬ ಮಗ, ಒಬ್ಬ ಮಗಳು ಹಾಗೂ ಅಪಾರ ಬಂದು ಮಿತ್ರರನ್ನು ಅಗಲಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ಸ್ಥಳೀಯ ಸಂಸ್ಥೆ ಮಾಜಿ ಕಾರ್ಯದರ್ಶಿಯಾದ ಶ್ರೀ ಹರ್ಷಕುಮಾರ್, ಎ.ಎಲ್.ಟಿ(ಸ್ಕೌ) ಇವರ ತಾಯಿ **ಶ್ರೀಮತಿ ನಾಗವೇಣಿ ಕೆದ್ಲಾಯ** ಇವರು ಫೆಬ್ರವರಿ 15 ರಂದು ದಕ್ಷಿಣ ಕನ್ನಡ ಜಿಲ್ಲೆ, ಉಜಿರೆಯಲ್ಲಿ ನಿಧನರಾದರು ಇವರಿಗೆ 89 ವರ್ಷ ವಯಸ್ಸಾಗಿತ್ತು.



ಶ್ರೀ ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕು ಚಿಕ್ಕ ಆಸಂಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸ್ಕೌಟ್ ವಿದ್ಯಾರ್ಥಿ **ಕುಮಾರ ಕಲ್ಲಯ್ಯ ಗಂಗಯ್ಯ ಹಿರೇಮಠ** ಇವರು ಫೆಬ್ರವರಿ 22 ರಂದು ನಿಧನರಾದರು. ಇವರಿಗೆ 13 ವರ್ಷ ವಯಸ್ಸಾಗಿದ್ದು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇವರು ದ್ವಿತೀಯ ಸೋಪಾನ ಮುಗಿಸಿದ್ದು ತೃತೀಯ ತರಬೇತಿಯಲ್ಲಿದ್ದರು. ಇತ್ತೀಚೆಗೆ ಮೂಡುಬಿದಿರೆಯಲ್ಲಿ ನಡೆದ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಭಾಗವಹಿಸಿದ್ದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

**22 ಫೆಬ್ರವರಿ 2023ರಂದು ವಿವಿಧ ಜಿಲ್ಲೆಗಳಲ್ಲಿ ನಡೆದ 'ಸಂಸ್ಥಾಪಕರ ದಿನಾಚರಣೆ' ಅಂಗವಾಗಿ ಕಬ್ಸ್-ಬುಲ್‌ಬುಲ್ಸ್ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದು.**



ರಾಮನಗರ



ಚಿತ್ರದುರ್ಗ



ದಕ್ಷಿಣ ಕನ್ನಡ



ಕಾರವಾರ



ಕೊಪ್ಪಳ



ತುಮಕೂರು



ಕಾರವಾರ



ರಾಯಚೂರು

Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 32)

SHAHEEN
GROUP OF INSTITUTIONS

34 years of excellence

# ADMISSIONS OPEN

3000+

Number of doctors are the Alumni of
**Shaheen College**

## COURSES OFFERED

**PUC (Science)**
Integrated with NEET/JEE

**PUC (Arts)**
Integrated with UPSC/CLAT

**NEET Long Term**
Repeaters Batch

**B.A & B.Sc**
Integrated with UPSC

**Pre Cum Mains UPSC for Graduates**
One Year Exclusive UPSC Course

**Shaheen NEET Online**
Download the App. **Shaheen Online**

» Hostel Facility for Boys & Girls » Scholarship for meritorious students

www.shaheengroup.org | **Toll Free: 1800 121 6235**
Head Office: Shaheen Nagar, BIDAR - 585403.

**If not delivered, please return to :**
**THE EDITOR, Karnataka Scout & Guide**
**State Headquarters, Shanthi Gruha**
**#39, Palace Road, Bengaluru - 560 001**
**Ph.: 080-22260017, 22267470**
**e-mail.: info@bsgkarnataka.org**
**shanthigruha@scout.org.in**
**www.bsgkarnataka.org**

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26